# ಇಡ್ಲಿ ಚಟ್ನಿ

■ **ಚೇತನ ಭಾರ್ಗವ ಬೆಂಗಳೂರು**



ಮದುವೆಯೆಂದ ಕೂಡಲೇ ನೆನಪಿಗೆ ಬರುವ ತಿಂಡಿಯೆಂದರೆ ಇಡ್ಲಿ ಹಾಗೂ ಚಟ್ನಿ ಅಲ್ಲವೇ. ಮೆದುವಾದ ಇಡ್ಲಿ ರುಚಿಯಾದ ಚಟ್ನಿ ಒಟ್ಟಿಗೆ ತಿಂದರೆ ಅದೆಷ್ಟು ಹಿತ . ಇದರಲ್ಲೇ ಮದುವೆಯ ನಂತರ ಗಂಡ ಹೆಂಡತಿ ಹೇಗೆ ಅನ್ಯೋನ್ಯತೆಯಿಂದ ಇರಬೇಕು ಎಂದು ತಿಳಿಯಬಹುದು . ಬರಿಯ ಇಡ್ಲಿ ರುಚಿ ಇರುವುದಿಲ್ಲ ಹಾಗೆಯೆ ಬರಿಯ ಚಟ್ನಿ ಕೂಡ ತಿನ್ನಲಾಗುವುದಿಲ್ಲ . ಎರಡನ್ನೂ ಸೇರಿಸಿ ತಿಂದರೇನೇ ಹಿತ . ಹಾಗೆಯೇ ಸಂಸಾರದಲ್ಲಿ ಗಂಡನೊಬ್ಬನೇ ಹೆಚ್ಚಲ್ಲ , ಹೆಂಡತಿ ಕಡಿಮೆಯೂ ಅಲ್ಲ . ಇಬ್ಬರು ಪರಸ್ಪರ ಹೊಂದಾಣಿಕೆಯಿಂದ ಅರಿತು ಬಾಳಿದರೆ ಸಂಸಾರ ಹಸನು ,ಬಾಳು ಬಂಗಾರ , ಮೆದುವಾಗಿ ಹಬೆಯಾಡುವ ಇಡ್ಲಿ ರುಚಿಯಾದ ಚಟ್ನಿಯಲ್ಲಿ ಮಿಂದು ಸವಿದಾಗಿನ ರುಚಿ ಸಂಸಾರದಲ್ಲೂ ಸಿದ್ಧಿಸುವುದು ಖಚಿತ ..ಹಾಗಾಗಿ ಬೆಳಗಿನ ತಿಂಡಿಗೆ ಇಡ್ಲಿ ಚಟ್ನಿ ಮಾಡೋಣ ಎಂದುಕೊಂಡು ಯೂಟ್ಯೂಬ್ ನಲ್ಲಿ ಇಡ್ಲಿಯನ್ನು ಮಾಡುವ ವಿಧಾನವೆಲ್ಲ ನೋಡಿಕೊಂಡು ಅದರಲ್ಲಿ ಕೊಟ್ಟ ಅಳತೆಯಂತೆಯೇ ಉದ್ದಿನಬೇಳೆಯನ್ನು ನೆನೆ ಹಾಕಿದೆ. ಸುಮಾರು ಮೂರು ಗಂಟೆ ನಂತರ ರುಬ್ಬಿ ಅದಕ್ಕೆ ಅಕ್ಕಿ ತರಿ(ಇಡ್ಲಿ ರವೆ) ಯನ್ನು ಮಿಕ್ಸ್ ಮಾಡಿ ಒಂದು ಪಾತ್ರೆಗೆ ಹಾಕಿ ಇಟ್ಟೆ. ನನ್ನ ಪತಿ ರಾಯರು ಕಚೇರಿಗೆ ಬೆಳಿಗ್ಗೆ 6:30ಗೆ ಮನೆಯಿಂದ ಹೊರಡಬೇಕಿದ್ದರಿಂದ ಬೇಗ ಎದ್ದು ಇಡ್ಲಿಯನ್ನು ಒಲೆಯ ಮೇಲೆ ಬೇಯಿಸಲು ಇಟ್ಟೆ. ಮುಂಜಾನೆಯ ಸವಿ ನಿದ್ರೆಯು ನನ್ನನ್ನು ಮತ್ತೆ ಮಲಗುವಂತೆ ಮಾಡಿತು. 10 ನಿಮಿಷದ ನಂತರ ಗ್ಯಾಸ್ ಅನ್ನು ಆಫ್ ಮಾಡೋಣ ಎಂದುಕೊಂಡಿದ್ದವಳಿಗೆ ನಿದ್ರಾದೇವಿ ಯಾವಾಗ ಆವರಿಸಿಕೊಂಡಳು ಎಂದು ತಿಳಿಯಲೇ ಇಲ್ಲ. ಮೂಗಿಗೆ ಕರಟಿದ ವಾಸನೆ ಬಡಿದ ಮೇಲೆಯೇ ನನಗೆ ಎಚ್ಚರವಾಗಿದ್ದು. ಆಗ ನನಗೆ ಒಲೆಯ ಮೇಲೆ ಇಡ್ಲಿ ಇಟ್ಟಿದ್ದೇನೆ ಎಂದು ನೆನಪಾಗಿ ಅಡುಗೆ ಮನೆಗೆ ಹೋಗಿ ನೋಡಿದರೆ ಪಾತ್ರೆಯಲ್ಲ ಸುಟ್ಟು ಹೋಗಿ ಪಕ್ಕದ ಮನೆಯವರೆಗೂ ಕರಟಿದ ವಾಸನೆ ಆವರಿಸಿತ್ತು. ಇಂದಿಗೂ ನನ್ನ ಇಡ್ಲಿಯ ಅವಾಂತರ ಕೇಳಿ ಮನೆಯವರೆಲ್ಲರೂ ಬಿದ್ದು ಬಿದ್ದು ನಗುತ್ತಾರೆ.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ



**ನಿಮ್ಮ ಹಂಪಿ ಪ್ರವಾಸ ಅನುಭವ**



ನೀವು ಹಂಪಿಗೆ ಭೇಟಿ ನೀಡಿದ್ದೀರಾ?
ಈ ಹಿಂದೆ ಹಂಪಿ ಹೇಗಿತ್ತು, ಈಗ ಹೇಗಾಗಿದೆ,
ಮುಂದೆ ಏನೆಲ್ಲಾ ಸೌಲಭ್ಯಗಳು ಪ್ರವಾಸಿಗರಾಗಿ ನೀವು ನಿರೀಕ್ಷಿಸುತ್ತೀರಿ?

ನಿಮ್ಮದೆ ಅಭಿಪ್ರಾಯಗಳನ್ನು 200 ಪದಗಳಲ್ಲಿ ಬರೆದು ಕಳುಹಿಸಿ, ಹಂಪಿ ಟೈಮ್ಸ್ ಮೂಲಕ ಅಧಿಕಾರಿಗಳ ಗಮನ ಸೆಳೆಯಿರಿ.

ಹಂಪಿ ಪ್ರವಾಸೋದ್ಯಮ ಅಭಿವೃದ್ಧಿಗೆ ನಿಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡುವುದರೊಂದಿಗೆ ಪ್ರವಾಸೋದ್ಯಮ ಪ್ರಗತಿಗೆ ಸಹಕರಿಸಿ.
ನಿಮ್ಮ ಅಭಿಪ್ರಾಯದೊಂದಿಗೆ ಹಂಪಿಗೆ ಭೇಟಿ ನೀಡಿದ ಕ್ಷಣದ ನಿಮ್ಮ ಫೋಟೊ ಇರಲಿ. ನಿಮ್ಮ ಅಭಿಪ್ರಾಯಗಳನ್ನು ಈ ಕೆಳಗಿನ ಇ-ಮೇಲ್/ ವಾಟ್ಸಪ್‌ಗೆ ಕಳುಹಿಸಿರಿ.

www.hampitimes.com
epaper.hampitimes.com
hampitimes@gmail.com
@hampitimes
9448633038


# ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಚೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊದ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.


**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038


## ಓದುಗರ ಗಮನಕ್ಕೆ


ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.


# ಒಂದೇ ಸೃಷ್ಟಿ ಹಲವು ದೃಷ್ಟಿ

ಅದೊಂದು ಅಂಧ ಮಕ್ಕಳ ಗುಂಪನ್ನು ಆನೆಯ ಮುಂದೆ ತಂದು ನಿಲ್ಲಿಸಿ ಆನೆಯ ಕುರಿತು ತಮಗೆ ತಿಳಿದಂತೆ ವಿವರಿಸಲು ಕೋರಿದರು. ಆನೆಯ ಮುಂದೆ ನಿಂತ ಮಗು ಆನೆಯ ಸೊಂಡಿಲನ್ನು ಮುಟ್ಟಿ ಬಲಿಷ್ಠವಾದ ಅತಿ ಉದ್ದದ ಮೂಗು ಇದೆ ಆನೆಗೆ ಎಂದು ಹೇಳಿದ. ಕಿವಿಗಳನ್ನು ಮುಟ್ಟಿದವ ಮೊರದಂಥ ಕಿವಿಗಳಿವೆ ಎಂದು ಹೇಳಿದ ಹೊಟ್ಟೆಯ ಭಾಗವನ್ನು ಮುಟ್ಟಿದವ ಬೆಟ್ಟದಂಥ ಆನೆ ಇದೆ ಎಂದು ಹೇಳಿದ ಬಾಲದ ಬಳಿ ಮುಟ್ಟಿದವ ಪುಟ್ಟ ಬಾಲ ಇಷ್ಟು ದೊಡ್ಡ ಆನೆಗೆ ಇರುತ್ತದೆಯೇ? ಎಂದು ಕೇಳಿದ. ಒಟ್ಟಿನಲ್ಲಿ ಎಲ್ಲ ಮಕ್ಕಳು ಅವರವರಿಗೆ ತೋಚಿದಂತೆ ಆನೆಯನ್ನು ವರ್ಣಿಸಿದರು. ಯಾರದ್ದೂ ತಪ್ಪಿಲ್ಲ. ಇಲ್ಲಿ ಆನೆ ಎಂಬ ಸೃಷ್ಟಿ ಒಂದೇ ಆದರೆ ನೋಡುತ್ತಿರುವ ಅಥವಾ ಅನುಭವ ಪಡೆದವರ ದೃಷ್ಟಿ ಬೇರೆ ಬೇರೆ.

ಪ್ರಸ್ತುತ ರಾಜಕೀಯ ಪರಿಸ್ಥಿತಿಯೂ ಹೀಗೆಯೇ ಇದೆ. ಇತಿಹಾಸ...... 'ಇತಿ' ಎಂದರೆ ಹೀಗೆ. ಹಾಸ' ಎಂದರೆ ಆಗಿರುವುದು. ಇತಿಹಾಸ ಎಂದರೆ ಈಗಾಗಲೇ ನಡೆದು ಹೋಗಿರುವುದು. ಯಾವುದು ನಡೆದುಹೋಗಿದೆಯೋ, ಯಾವುದನ್ನು ನಾವು ಬದಲಾಯಿಸಲು ಸಾಧ್ಯವಿಲ್ಲವೋ ಅದನ್ನು ಹಿಡಿದುಕೊಂಡು ಬಡಿದಾಡುವುದು ಯಾವ ಜಾಣತನದ ಲೆಕ್ಕ?? ತಮ್ಮ ತಮ್ಮ ರಾಜಕೀಯ ಲಾಭಕ್ಕಾಗಿ ಇತಿಹಾಸ ಸೇರಿದ ಹಲವಾರು ಐತಿಹಾಸಿಕ ವ್ಯಕ್ತಿಗಳನ್ನು ಹಿಡಿದು ಬಡಿದಾಡುತ್ತಿರುವುದು ಸರಿಯೇ ??ತಿಳಿ ನೀರಿನ ಕೊಳದಲ್ಲಿ ಕಲ್ಲೆಸದು ತರಂಗಗಳನ್ನು ಎಬ್ಬಿಸುವ ಕಿಡಿಗೇಡಿ ಮಕ್ಕಳಂತೆ ಆಗಿದೆ ಇವರ ಪರಿಸ್ಥಿತಿ.

ಹಾಗಾದರೆ ಇತಿಹಾಸವನ್ನು ಕೆದಕುವುದು ತಪ್ಪೇ ?ಖಂಡಿತ ತಪ್ಪಲ್ಲ. ಇತಿಹಾಸವನ್ನು ಕೆದಕಬೇಕು ಆದರೆ ಅದು ಸಮಾಜದ ಅಭಿವೃದ್ಧಿಗೆ ಪೂರಕವಾಗಿರಬೇಕೇ ಹೊರತು ಮಾರಕವಾಗಬಾರದು. ಅವು ಹಿಂದಿನ ಹಿರಿಯರು ಮಾಡಿಟ್ಟುಹೋದ ಒಳ್ಳೆಯ ಕೆಲಸಗಳನ್ನು ಮಾತ್ರ ಪರಿಗಣಿಸಿ ಕೆಟ್ಟದ್ದನ್ನು ಬಿಟ್ಟು ಬಿಡುವುದು ಒಳ್ಳೆಯದು. ಒಳ್ಳೆಯದು ನಮಗೆ ಯಾವ ರೀತಿ ನಡೆದುಕೊಳ್ಳಬೇಕು ಎಂಬುದಕ್ಕೆ ಪಾಠವಾದರೆ, ಕೆಟ್ಟದ್ದು ಯಾವುದನ್ನು ಮಾಡಬಾರದು ಎಂಬುದಕ್ಕೆ ಸಾಕ್ಷಿಯಾಗಿ ನಮ್ಮ ಅರಿವಿನಲ್ಲಿ ಉಳಿದು ಹೋಗಬೇಕು.

"ಉಳಿವಿಗಾಗಿ ಹೋರಾಟ" ಎಂಬ ಡಾರ್ವಿನ್ ವಾದದ ಪ್ರಕಾರ ಎಲ್ಲರೂ ತಮ್ಮ ತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯದ ಉಳಿವಿಗಾಗಿ,ತಮ್ಮದೇ ದೃಷ್ಟಿಕೋನಗಳಿಂದಾಗಿ ಹಲವು ಬಾರಿ ನಿರ್ಧಾರಗಳನ್ನು ತೆಗೆದುಕೊಂಡಿರಬಹುದು. ಒಂದಿಡೀ ಸಮಷ್ಟಿಗೆ ಒಳ್ಳೆಯದಾಗುವುದಾದರೆ ಒಬ್ಬಿಬ್ಬರಿಗೆ ತೊಂದರೆಯಾದರೂ ಪರವಾಗಿಲ್ಲ ಎಂಬ ದೂರದೃಷ್ಟಿಯೂ ಈ ನಿರ್ಧಾರಗಳ ಹಿಂದಿನ ಕಾರಣವಾಗಿರಬಹುದು. ಕೆಲವೊಮ್ಮೆ ಆ ನಿರ್ಧಾರಗಳಿಂದ ತಪ್ಪು ಕಲ್ಪನೆಗಳು, ಅನಿರೀಕ್ಷಿತ ತಿರುವುಗಳು ಆಕಸ್ಮಿಕ ಘಟನೆಗಳು ಕೂಡ ನಡೆದಿರಬಹುದು. ಎಲ್ಲವೂ ಕಾಲಾಯ ತಸ್ಮೈನ್ನಮಃ. ಅಕಸ್ಮಾತ್ ಆ ಜಾಗದಲ್ಲಿ ನಾವೇ ಇದ್ದು ನಾವೇನು ಮಾಡಲು ಸಾಧ್ಯ ಎಂದರೆ ಬಹುಶಃ ನಾವು ಕೂಡ ಅವರ ನಿರ್ಧಾರಗಳನ್ನೇ ಅನುಮೋದಿಸ ಬೇಕಾದಂತಹ ಪರಿಸ್ಥಿತಿ ಇರುತ್ತಿತ್ತೇನೋ!!.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ಇಂತಹ ಸಮಯದಲ್ಲಿ ಈ ರೀತಿಯ ವಾದ ವಿವಾದಗಳು, ಸಾಧಕ ಬಾಧಕಗಳು, ಪೂರಕ ಚರ್ಚೆಗಳು ಜನರ ವೈಚಾರಿಕ ಪ್ರಜ್ಞೆಯನ್ನು ಜಾಗೃತ ಗೊಳಿಸುವಂತೆ ಇರಬೇಕೇ ಹೊರತು ಯಾವುದೇ ರೀತಿಯ ಆತುರದ, ಅತಾರ್ಕಿಕ, ಸಾಮಾಜಿಕ ವಿಷಮತೆಯನ್ನು ಹರಡುವ, ಗಲಭೆ ದೊಂಬಿಗಳಿಗೆ ಕಾರಣವಾಗುವ ದೋಷಪೂರಿತ ಕ್ರಿಯೆಗಳಾಗಬಾರದು.

ಯಾವುದು ಆಗಬಾರದು ಎಂದುಕೊಂಡಿರುತ್ತೇವೆಯೋ ಅದು ಆಗಿಯೇ ಹೋಗಿದೆ, ಅದನ್ನು ಸರಿಪಡಿಸುವುದು ಅಸಾಧ್ಯ. ಆದರೆ ತಿಂಗಳುಗಳ, ವರ್ಷಗಳ, ದಶಕಗಳ ನಂತರ ಅದನ್ನೇ ಮತ್ತೆ ಮತ್ತೆ ಕೆದಕಿದರೆ ಎಲ್ಲರ ಕೈಗೆ ಸಿಗುವುದು ಕೇವಲ ಮಣ್ಣು ಮಾತ್ರ .ನಮ್ಮ ಹಿರಿಯರು ಹೇಳುತ್ತಾರಲ್ಲ ಗಂಧದೊಡನೆ ಗುದ್ದಾಡಿದರೆ ಗಂಧ ಸಿಗುವುದು ಸಗಣಿಯೊಂದಿಗೆ ಗುದ್ದಾಡಿದರೆ....... ದುರ್ಗಂಧ ಸಿಗುವುದು.ಆಯ್ಕೆ ನಮ್ಮದು. ಸತ್ಯವೇ ನಮ್ಮ ತಾಯಿ ತಂದೆ ಸತ್ಯವೇ ನಮ್ಮ ಬಂಧು ಬಳಗ ಎಂದು ಹಾಡಿದ ಪುಣ್ಯಕೋಟಿಯ ನಾಡು ನಮ್ಮದು. ನ್ಯಾಯ, ನಿಷ್ಠುರತೆ, ಸತ್ಯ ಅಹಿಂಸೆಯ ಬೀಡು ನಮ್ಮದು. ಆದರೆ ಇದೆಲ್ಲವನ್ನು ಮರೆತು ಪರಸ್ಪರ ಕೆಸರೆರಚಾಟದಲ್ಲಿ ತೊಡಗಿದರೆ ಪ್ರಯೋಜನವೇನೂ ಇಲ್ಲ.

ಅತಿದೊಡ್ಡ ಲಂಚಗುಳಿ, ಭ್ರಷ್ಟ, ನೀತಿ ನಿಯಮಗಳನ್ನು ಗಾಳಿಗೆ ತೂರುವ ,ಸುಳ್ಳಿನ ಸರದಾರನಾದ ವ್ಯಕ್ತಿ ಕೂಡ ತನ್ನ ಮನೆಯಲ್ಲಿ ತನ್ನ ಮಕ್ಕಳಿಗೆ ಆದರ್ಶಗಳನ್ನು ಹೇಳಿಕೊಡುತ್ತಾನೆ.ಕಾರಣವಿಷ್ಟೆ ಸಾಮಾಜಿಕವಾಗಿ ಆತನೆಷ್ಟೇ ಸಭ್ಯತೆಯ ಮುಖವಾಡ ಹೊಂದಿದ್ದರೂ ಆತನ ಅಂತರಾಳದಲ್ಲಿ ತಪ್ಪಿತಸ್ಥ ಭಾವನೆ ಜಾಗೃತವಾಗಿರುತ್ತದೆ. ಯಾಕೆಂದರೆ ಸತ್ಯ ಧರ್ಮ, ದಯೆ, ಕರುಣೆ, ಭಕ್ತಿಯ ಶಕ್ತಿ ನ್ಯಾಯ, ನಿಷ್ಠೆ ಅಹಿಂಸೆ ಹೋರಾಟ ಇವೆಲ್ಲವೂ ವ್ಯಕ್ತಿಗೆ ಜನ್ಮಗತವಾಗಿ ದೊರೆತ ಸಂಸ್ಕಾರದ ಫಲ.ನಮ್ಮೆಲ್ಲರ ಶಾಲಾ ಕಾಲೇಜುಗಳಲ್ಲಿನ ಇವುಗಳನ್ನು ಸತತವಾಗಿ ಕೇಳಿ, ಹಾಡಿ, ಮಾಡಿ ಅನುಭವಿಸಿ ಪಡೆದಿರುವ ವಿದ್ಯೆಯಲ್ಲಿ ಅಂತರ್ಗತವಾಗಿರುವ ಶಕ್ತಿಗಳು ಇವುಗಳೇ!! ಜನರಿಗಾಗಿ, ಜನಾಭಿವೃದ್ಧಿಗಾಗಿ ರಾಜಕೀಯವೇ ಹೊರತು, ರಾಜಕೀಯಕ್ಕಾಗಿ ಜನರಲ್ಲ. ಪ್ರಜ್ಞಾವಂತಿಕೆಯ ಕೊರತೆಯು ನಮ್ಮನ್ನು ಅಧೋಗತಿಗೆ ಎಳಸುತ್ತದೆ. ಒಬ್ಬರ ಕ್ಷುಲ್ಲಕ ಅಭಿಪ್ರಾಯ ಒಂದಿಡೀ ಸಮಷ್ಟಿಯ ಗುಂಪಿನ ಅಭಿಪ್ರಾಯವಲ್ಲ. ಹಾಗೆಯೇ ಸಾರ್ವತ್ರಿಕವಾಗಿ ಮಾತನಾಡುವಾಗಮನುಷ್ಯಹೆಚ್ಚುಜಾಗರೂಕನಾಗಿರಬೇಕಾಗಿರುವುದು ಅಷ್ಟೇ ಅವಶ್ಯ. ಪ್ರಸ್ತುತ ಸಮಾಜಕ್ಕೆ ಸುಸ್ಥಿರ, ಆರೋಗ್ಯಕರ, ಮೌಲ್ಯಯುತ ಮತ್ತು ಸ್ವಸ್ಥ ಜನಾಂಗದ ಅವಶ್ಯಕತೆ ಇದೆ.ನಮ್ಮ ಗುರಿ ಅಭಿವೃದ್ಧಿಯತ್ತ ಆದರೆ ಅದರ ಬೇರು ಆರೋಗ್ಯಯುತ ಸಮಾಜ. ಮಹತ್ವದ ಅಧ್ಯಯನದ ಪ್ರಕಾರ ಅತಿ ಹೆಚ್ಚು ಸಂತಸದ ಪ್ರಮಾಣವನ್ನು (ಹ್ಯಾಪಿನೆಸ್ ಕೋಶಂಟ್ ) ಹೊಂದಿರುವ ಭೂತಾನ್ ರಾಜ್ಯದಲ್ಲಿ ಮೂಲಭೂತ ಸೌಕರ್ಯಗಳಿಗೆ(ನಾವು ಬಯಸುವ ) ಕೊರತೆಯಿದ್ದರೂ, ಭೌತಿಕ ಅವಶ್ಯಕತೆಗಳನ್ನು ಉಪೇಕ್ಷಿಸಿ ಉನ್ನತ ಪಾರಮಾರ್ಥಿಕ ಗುಣಾವಗುಣಗಳ ಜೊತೆ ಅವರು ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಇರುವುದರಲ್ಲೇ ಸಂತಸವನ್ನು ಕಂಡುಕೊಂಡಿದ್ದಾರೆ .ಅತ್ಯಂತ ಕಡಿಮೆ ಅವಶ್ಯಕತೆಯಲ್ಲಿಯೇ ಅತಿ ಹೆಚ್ಚಿನ ನೆಮ್ಮದಿಯನ್ನು ಹುಡುಕಿಕೊಂಡಿದ್ದಾರೆ. ಎಲ್ಲ ವಿಷಯಗಳಲ್ಲಿಯೂ ಧನಾತ್ಮಕವಾದುದನ್ನು ಮಾತ್ರ ಅವರು ಆಯ್ಕೆ ಮಾಡಿಕೊಂಡಿದ್ದಾರೆ.ಆ ದೇಶ ಅಭಿವೃದ್ಧಿಯ ದೃಷ್ಟಿಯಲ್ಲಿ ನಮಗಿಂತ ಮಂಚೂಣಿಯಲ್ಲಿದೆ ಯಾಕೆಂದರೆ ಅತ್ಯಂತಹೆಚ್ಚಿನ ಸಂತಸ ಪ್ರಮಾಣ ಹೊಂದಿರುವ ದೇಶ ಆರೋಗ್ಯಕರ ಸಮಾಜವನ್ನು ಹೊಂದಿದೆ.

ನಮ್ಮ ಮನೆಯ ಮಗು ತನ್ನ ಮೈಯೆಲ್ಲಾ ಕೆಸರು ಮಾಡಿಕೊಂಡು ಬಂದರೆ ಪ್ರಾರಂಭದಲ್ಲಿ ಕೊಂಚ ಕಸಿವಿಸಿಯಿ0ದ ಕೂಗಾಡಿದರೂ ಅನಿವಾರ್ಯವಾಗಿ ಆ ಮಗುವನ್ನು ಶುಚಿಗೊಳಿಸಿ ಅದರ ಮೈ ಒರೆಸಿ ಪೌಡರ್ ಹಾಕಿ ಮುದ್ದಾಡುವುದಿಲ್ಲವೇ?? ನಮ್ಮ ಅನಿಸಿಕೆಗಳು ಅಭಿಪ್ರಾಯಗಳು ನಮಗಿರುವ ಅನುಭವದ ಹಿನ್ನೆಲೆಯ ಮೇಲೆ ಬರುವಂಥವು ನಮ್ಮೆಲ್ಲರಿಗೂ ಬೇರೆಬೇರೆ ಅನುಭವಗಳು ಹಿನ್ನೆಲೆಗಳು ಇರುವುದರಿಂದ ದೃಷ್ಟಿಭೇದ ಸಾಮಾನ್ಯ. ಹಾಗೆಯೇ ನಮ್ಮ ಸುತ್ತಲಿನ ಸಮಾಜದ ಜನರ ಅಭಿಪ್ರಾಯಗಳು ಭೇದಗಳು ಏನೇ ಇರಲಿ, ಪರ ವಿರೋಧಗಳು ಹೇಗೇ ಬರಲಿ, ಪೂರ್ವಾಗ್ರಹ ಪೀಡಿತರಾಗದೆ ಅವುಗಳಲ್ಲಿನ ಧನಾತ್ಮಕವಾದುದನ್ನು ಮಾತ್ರ ಆಯ್ದುಕೊಳ್ಳುತ್ತಾ ಅದನ್ನೇ ಹಂಚುತ್ತಾ ದೃಷ್ಟಿ ಹಲವಾದರೂ ನೋಟ ಒಂದೇ ಎಂಬಂತೆ ಇರುವ ಸಮಾಜದ ಪರಿಕಲ್ಪನೆಯಲ್ಲಿ .......



# ಜೂನ್ 3ರಂದು ಕರ್ನಾಟಕ ಈಶಾನ್ಯ ಪದವೀಧರರ ಕ್ಷೇತ್ರ ಚುನಾವಣೆ

## ಜಿಲ್ಲೆಯ ವ್ಯಾಪ್ತಿಯಲ್ಲಿ 5ಕ್ಕಿಂತ ಹೆಚ್ಚು ಜನರು ಗುಂಪು ಸೇರುವುದು, ಮೆರವಣಿಗೆ, ಸಭೆ–ಸಮಾರಂಭಗಳಿಗೆ ನಿಷೇಧ: ಡಿಸಿ ದಿವಾಕರ

■ **ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಈಶಾನ್ಯ ಪದವೀಧರರ ಕ್ಷೇತ್ರ ದೈವಾರ್ಷಿಕ ಚುನಾವಣೆಯನ್ನು ಮುಕ್ತ ಹಾಗೂ ನ್ಯಾಯಸಮ್ಮತವಾಗಿ ನಡೆಸುವ ಹಿನ್ನೆಲೆಯಲ್ಲಿ ಜೂನ್ 01ರ ಸಂಜೆ 06 ಗಂಟೆಯಿಂದ ಜೂನ್ 03ರ ಮಧ್ಯರಾತ್ರಿಯವರೆಗೆ ವಿಜಯನಗರ ಜಿಲ್ಲೆಯಾದ್ಯಂತ ಸಿಆರ್‌ಪಿಸಿ 1973ರ ಕಲಂ 144ರಡಿ ಕೆಲವು ಷರತ್ತುಗಳನ್ನು ವಿಧಿಸಿ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ನಿಷೇಧಾಜ್ಞೆಜಾರಿಗೊಳಿಸಿ ಆದೇಶ ಹೊರಡಿಸಿದ್ದಾರೆ.

ವಿಜಯನಗರ ಜಿಲ್ಲೆಯ ವ್ಯಾಪ್ತಿಯಲ್ಲಿ 05ಕ್ಕಿಂತ ಹೆಚ್ಚು ಜನರು ಗುಂಪು ಸೇರುವುದು, ಮೆರವಣಿಗೆ ಅಥವಾ ಸಭೆ–ಸಮಾರಂಭ ಜರುಗಿಸುವುದನ್ನು ನಿಷೇಧಿಸಿದೆ., ಶಸ್ತ್ರ, ಬಡಿಗೆ, ಬರ್ಚಿ, ಖಡ್ಗ, ಗದೆ, ಬಂದೂಕು, ಚೂರಿ, ಲಾಠಿ, ಡೊಣ್ಣೆ, ಚಾಕು ಅಥವಾ ದೇಹಕ್ಕೆ ಅಪಾಯವನ್ನುಂಟು ಮಾಡಬಹುದಾದ ಯಾವುದೇ ಮಾರಕಾಸ್ತ್ರವನ್ನು ತೆಗೆದುಕೊಂಡು ಹೋಗುವುದನ್ನು ಮತ್ತು ಅವುಗಳೊಂದಿಗೆ ತಿರುಗಾಡುವುದನ್ನು ಪ್ರತಿಬಂಧಿಸಲಾಗಿದೆ. ಮತಗಟ್ಟೆ ಕೇಂದ್ರಗಳ 100 ಮೀಟರ್ ವ್ಯಾಪ್ತಿಯೊಳಗೆ ಚುನಾವಣೆ ಪ್ರಚಾರ ನಿಷೇಧಿಸಿದೆ.

ಈ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಜೆರಾಕ್ಸ್ ಅಂಗಡಿ, ಬುಕ್‌ಸ್ಟಾಲ್, ಸೈಬರ್‌ಕೆಫೆಗಳನ್ನು ನಿರ್ಬಂಧಿಸಿದೆ. ಕಲ್ಲುಗಳನ್ನು, ಕಾರ ಪದಾರ್ಥ ಇಲ್ಲವೆ ಸ್ಫೋಟಕ ವಸ್ತುಗಳು ಹಾಗೂ ಯಾವುದೇ ದಾಹಕ ವಸ್ತುಗಳನ್ನು ಹಾಗೂ ಇತ್ಯಾದಿಗಳನ್ನು ಸದರಿ ಸ್ಥಳಕ್ಕೆ ತೆಗೆದುಕೊಂಡು ಹೋಗುವುದನ್ನು ಹಾಗೂ ಶೇಖರಿಸುವುದನ್ನು ನಿಷೇಧಿಸಲಾಗಿದೆ. ಕಲ್ಲುಗಳನ್ನು ಮತ್ತು ಎಸೆಯುವಂಥಹ ವಸ್ತುಗಳನ್ನು, ಎಸೆಯುವ ಅಥವಾ ಬಿಡುವ ಸಾಧನಗಳನ್ನು ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲಾಗಿದೆ.

ಮನುಷ್ಯರೂಪದ ಅಥವಾ ಅವುಗಳ ಆಕೃತಿ ಅಥವಾ ಪ್ರತಿಮೆಗಳ ಪ್ರದರ್ಶನ ದಹನ ಮಾಡುವುದನ್ನು ಪ್ರತಿಬಂಧಿಸಲಾಗಿದೆ. ಎಲ್ಲಾ ಮತಗಟ್ಟೆ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯ ಸ್ಥಳ ನಿರ್ಬಂಧಿತ ಪ್ರದೇಶವಾಗಿದ್ದು, ಈ ಪ್ರದೇಶದಲ್ಲಿ ಖಾಸಗಿ ವಾಹನಗಳ ನಿಲುಗಡೆ, ಧ್ವನಿವರ್ಧಕ ಬಳಕೆ ಮುಂತಾದವುಗಳನ್ನು ನಿಷೇಧಿಸಿದೆ ಹಾಗೂ ಮತಗಟ್ಟೆ ಕೇಂದ್ರಗಳ 100 ಮೀಟರ್ ವ್ಯಾಪ್ತಿಯಲ್ಲಿ ಪಕ್ಷದ ಪ್ರಚಾರ, ಮತದ ಓಲೈಕೆ ಮುಂತಾದವುಗಳನ್ನು ಮಾಡುವಂತಿಲ್ಲ ಮತ್ತು ಈ ಸ್ಥಳದಲ್ಲಿ ಬಹಿರಂಗವಾಗಿ ಘೋಷಣೆ, ಪದ ಹಾಡುವುದು, ವಾದ್ಯ ಬಾರಿಸುವುದು, ವ್ಯಾಖ್ಯಾನ ಕೊಡುವುದು, ಸನ್ನ ಅಥವಾ ನಕಲಿ ಪ್ರದರ್ಶನವನ್ನು ಹಾಗೂ ಸಾರ್ವಜನಿಕ ಸಭ್ಯತೆ ಅಥವಾ ನೀತಿಯನ್ನು ಆಕ್ರಮಿಸಬಹುದಾದ ಕೃತ್ಯಗಳನ್ನು ಮಾಡುವುದನ್ನು ನಿಷೇಧಿಸಲಾಗಿದೆ.



ಸಾರ್ವಜನಿಕವಾಗಿ ಯಾವುದೇ ವ್ಯಕ್ತಿ ಪ್ರಚೋದನಾತ್ಮಕ ಹಾಗೂ ಉದ್ರೇಕಕಾರಿ ಹಾಡುಗಳು, ಕೂಗಾಟ ಮಾಡುವುದನ್ನು ಹಾಗೂ ವ್ಯಕ್ತಿಗಳ ತೇಜೋವಧೆ ಮಾಡುವಂತಹ ಚಿತ್ರಗಳು, ಚಿಹ್ನೆಗಳು, ಪ್ರತಿಕೃತಿಗಳು ಮುಂತಾದವುಗಳನ್ನು ಪ್ರದರ್ಶಿಸುವುದಾಗಲಿ ಹಾಗೂ ಸಾರ್ವಜನಿಕ ಗಾಂಭೀರ್ಯ ಹಾಗೂ ನೈತಿಕತೆಗೆ ಭಂಗತರುವಂತಹ ಅಥವಾ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗತರುವಂತಹ ಯಾವುದೇ ಕೃತ್ಯಗಳಲ್ಲಿ ತೊಡಗುವುದನ್ನು ನಿಷೇಧಿಸಲಾಗಿದೆ.

ಯಾವುದೇ ವ್ಯಕ್ತಿ ಬಹಿರಂಗವಾಗಿ ಮೇಲೆ ವಿವರಿಸಿದ ಮಾರಕಾಸ್ತ್ರಗಳು, ಸ್ಫೋಟಕ ವಸ್ತುಗಳು, ವಿನಾಶಕಾರಿ ವಸ್ತುಗಳು ಹಾಗೂ ಇತರೆ ಆಕ್ಷೇಪಾರ್ಹ ವಸ್ತುಗಳನ್ನು ಹೊಂದಿದ್ದು ಕಂಡು ಬಂದ ಕೂಡಲೇ ಅವುಗಳನ್ನು ವಶಪಡಿಸಿಕೊಳ್ಳಲು ಪೊಲೀಸ್ ಅಧಿಕಾರಿಗಳಿಗೆ ಅಧಿಕಾರ ಇರುತ್ತದೆ. ಅಂಥಹ ಮಾರಕಾಸ್ತ್ರಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಮಾಡಿಕೊಳ್ಳಲಾಗುವುದು. ಅಲ್ಲದೇ ಸಂಬಂಧಿಸಿದ ವ್ಯಕ್ತಿಗಳ ಮೇಲೆಯು ಸಹ ಕಾನೂನುರೀತ್ಯ ಕ್ರಮ ಜರುಗಿಸಲಾಗುವುದು. ಶವಸಂಸ್ಕಾರಕ್ಕೆ ಅಥವಾ ಮದುವೆ ಮತ್ತು ಧಾರ್ಮಿಕ ಮೆರವಣಿಗೆಗಳಿಗೆ ಈ ಆಜ್ಞೆ ಅನ್ವಯಿಸುವುದಿಲ್ಲ. ಮದುವೆ ಮತ್ತು ಇತರೆ ಧಾರ್ಮಿಕ ಮೆರವಣಿಗೆಗಳು ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಹಾಗೂ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತರದಂತೆ ಮಾರ್ಗಸೂಚಿಗಳನ್ನು ನಿಯಮಗಳನ್ನು ಪಾಲಿಸುವುದು., ಚುನಾವಣಾ ಕಾರ್ಯದಲ್ಲಿ ಚುನಾವಣಾಧಿಕಾರಿ ಅವರಿಂದ ಅನುಮತಿ ಪಡೆದ ಅಧಿಕಾರಿಗಳು ಸಿಬ್ಬಂದಿ ಹೊರತುಪಡಿಸಿ ಮತಗಟ್ಟೆ ಕೇಂದ್ರಗಳ ಸುತ್ತಲು 100 ಮೀಟರ್ ಅಂತರದಲ್ಲಿ ಮೊಬೈಲ್ ಫೋನ್, ಕಾರ್ಡ್‌ಲೆಸ್ ಪೋನ್, ಅಥವಾ ಇನ್ನಿತರ ಎಲೆಕ್ಟ್ರಾನಿಕ್ಸ್ ಉಕರಣಗಳನ್ನು ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲಾಗಿದೆ. ಈ ಅವಧಿಯಲ್ಲಿ ಪ್ರಜಾಪ್ರತಿನಿಧಿ ಕಾಯ್ದೆ 1951ರ ಕಲಂ 126ರ ಷರತ್ತುಗಳನ್ನು ಪಾಲಿಸತಕ್ಕದ್ದು., ಮತಗಟ್ಟೆಗಳ ಸುತ್ತಲೂ 100 ಮೀಟರ್ ಪರಿಮಿತಿಯಲ್ಲಿ ಪ್ರಚಾರಕ್ಕೆ ಸಂಬಂಧಿಸಿದ ಪೋಸ್ಟರ್ ಬ್ಯಾನರ್ ಅಥವಾ ಇನ್ನಾವುದೇ ವಸ್ತುಗಳನ್ನು ಬಳಸುವಂತಿಲ್ಲ. ಚುನಾವಣೆಯ ಮತದಾನವು ಅಂತ್ಯಗೊಳ್ಳುವ 48 ಗಂಟೆಗಳ ಪೂರ್ವದಲ್ಲಿ ಚುನಾವಣೆ ಪ್ರಚಾರ ಹಾಗೂ ಚುನಾವಣೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಧ್ವನಿವರ್ಧಕಗಳನ್ನು ಬಳಸುವಂತಿಲ್ಲ. ಈ ಸಮಯದಲ್ಲಿ ರಾಜಕೀಯ ಪಕ್ಷಗಳು ಅಭ್ಯರ್ಥಿಗಳು ಬಾಗಿಲಿನಿಂದ ಬಾಗಿಲಿಗೆ ಹೋಗಿ ಮತಯಾಚಿಸುವ ಸಲುವಾಗಿ ಮನೆಯಿಂದ ಮನೆಗೆ ಹೋಗುವುದು ನಿರ್ಬಂಧಿಸಿರುವುದಿಲ್ಲ. ಆದರೆ ಜನರಿಗಿಂತ ಹೆಚ್ಚಿನ ಜನರು ಗುಂಪು ಕೂಡಿಕೊಂಡು ಮನೆಯಿಂದ ಮನೆಗೆ ಹೋಗಿ ಮತಯಾಚಿಸುವುದು ನಿರ್ಬಂಧಿಸಲಾಗಿದೆ. ಈ ಆದೇಶವನ್ನು ಉಲ್ಲಂಘಿಸುವವರ ವಿರುದ್ಧ ಭಾರತೀಯ ದಂಡ ಸಂಹಿತೆಯ 188ರ ಪ್ರಕಾರ ಕ್ರಮವನ್ನು ಜರುಗಿಸಲಾಗುವುದು. ಈ ಆದೇಶವು ಮತದಾನ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಪೊಲೀಸ್ ಅಧಿಕಾರಿಗಳಿಗೆ ಹಾಗೂ ಚುನಾವಣಾ ಕಾರ್ಯನಿರತ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಹಾಗೂ ಒಬ್ಬೊಬ್ಬರಾಗಿ ಮತಗಟ್ಟೆಗಳಿಗೆ ತೆರಳಿ ಮತದಾನ ಮಾಡುವ ಮತದಾರರಿಗೆ ಅನ್ವಯಿಸುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

# ಬುದ್ಧನ ಪ್ರಭಾವದಿಂದ ಸ್ವಭಾವವನ್ನೇ ಬದಲಾಯಿಸಿ ಕೊಂಡವರು.

ಬಾಲ್ಯದಲ್ಲಿಯೇ ರೋಗಿಗಳನ್ನು ಮುಪ್ಪಾದವರನ್ನು ಮತ್ತು ಶವವನ್ನು ಕಂಡ ಸಿದ್ದಾರ್ಥ ಅವುಗಳಿಗೆ ಪರಿಹಾರಗಳನ್ನು ಹುಡುಕುತ್ತಾ ಗಯಾ ಎಂಬಲ್ಲಿಗೆ ಬರುತ್ತಾನೆ ಅಲ್ಲಿ ಬೋಧಿವೃಕ್ಷದ ಕೆಳಗೆ ಕುಳಿತು ತಪಸ್ಸನ್ನು ಮಾಡುತ್ತಾನೆ. ಬುದ್ಧನಿಗೆ ಜ್ಞಾನೋದಯವಾಗುತ್ತದೆ. ಆ ಜ್ಞಾನವನ್ನು ಜನರಿಗೆ ತಲುಪಿಸಲು ತನ್ನ ಶಿಷ್ಯಂದಿರ ಜೊತೆ ಊರೂರು ಅಲೆದಾಡುತ್ತಾನೆ. ಇಂತಹ ಸಂದರ್ಭಗಳಲ್ಲಿ ಬುದ್ಧನಿಗೆ ಹಲವಾರು ಜನರು ಅನುಯಾಯಿಯಾಗುತ್ತಾರೆ. ಅಲ್ಲದೆ ಪರಿವರ್ತನೆಯೂ ಆಗುತ್ತಾರೆ. ಅಂಥವರಲ್ಲಿ ಆಮ್ರ ಪಾಲಿಕೆ,ಅಂಗುಲಿಮಾಲ ಮತ್ತು ಸ್ವತಃ ತನ್ನ ಹೆಂಡತಿ ಮತ್ತು ಮಗನು ಕೂಡ ಬೌದ್ಧ ಧರ್ಮದ ಅನುಯಾಯಿಯಾಗುತ್ತಾರೆ. ಯಾವುದು ತನ್ನ ಮಗ ಆಗಬಾರದೆಂದು ತಂದೆ ಶುದ್ಧೋದನ ಬಯಸಿದ್ದನೊ ಮಗ ಅದೇ ದಾರಿಯಲ್ಲಿ ನಡೆದನು. ಒಂದು ಸಾಮ್ರಾಜ್ಯದ ಅಧಿಪತಿಯಾಗಬೇಕಾಗಿದ್ದ ಸಿದ್ದಾರ್ಥ ಬುದ್ಧನಾಗಿ ಜನರಿಗೆ ಉಪದೇಶವನ್ನು ನೀಡುತ್ತಾ ಊರೂರು ಅಲೆಯುತ್ತಿದ್ದನು.'

**"ಆಮ್ರ ಪಾಲಿಕೆ ಬದಲಾವಣೆಯಾಗಿದ್ದು."**

ಆಮ್ರ ಪಾಲಿಕೆ ಎಂಬ ಸ್ತ್ರೀ ಮಾವಿನ ತೋಟದ ಒಡತಿಯಾಗಿದ್ದಳು. ಜೊತೆಗೆ ನೋಡಲು ಸುಂದರಿಯಾಗಿದ್ದ ಆಕೆ, ಸಂಪತ್ತಿನ ಒಡತಿಯೂ ಆಗಿದ್ದಳು. ಆಕೆಯ ಸಹವಾಸದಲ್ಲಿರಲು ಎಷ್ಟೋ ಶ್ರೀಮಂತರು ಕಾಯುತ್ತಿದ್ದರು.ಹೀಗಿರುವಾಗ ಒಮ್ಮೆ ಗೌತಮ ಬುದ್ಧನ ಅನುಯಾಯಿಗಳು ಆ ಊರಿಗೆ ಭಿಕ್ಷೆಗಾಗಿ ಬಂದರು. ಭಿಕ್ಷೆಯನ್ನು ಬೇಡುತ್ತಾ ಬೇಡುತ್ತಾ ಕೊನೆಗೆ ಆಮ್ರ ಪಾಲಿಕೆಯ ಮನೆಗೆ ಬಂದರು. ಅವರನ್ನೆಲ್ಲ ದಿಟ್ಟಿಸಿ ನೋಡುತ್ತಾ ಆಮ್ರ ಪಾಲಿಕೆಯು ಹೊರಗಡೆ ಬರುತ್ತಾಳೆ ಅವರುಗಳಲ್ಲಿ ಒಬ್ಬರು ತೇಜಸ್ವಿನಿಂದ ಕೂಡಿದ, ಒಬ್ಬ ಅನುಯಾಯಿಯನ್ನು ಗಮನಿಸಿದಳು ಕೂಡಲೇ ಅವರು ಒಬ್ಬರನ್ನು ಮಾತ್ರ ಒಳಗೆ ಕರೆದಳು. ಉಳಿದವರಿಗೆಲ್ಲ ಆಶ್ಚರ್ಯವಾಗಿ ಅಲ್ಲಿಯೇ ನಿಂತರು . ಒಳಗೆ ಹೋದ ಸನ್ಯಾಸಿಯನ್ನು ಕುರಿತು ಆಮ್ರ ಪಾಲಿಕೆಯು ಆತನ ಸೌಂದರ್ಯವನ್ನು ಬಣ್ಣಿಸುತ್ತ, ನಾನು ಇಲ್ಲಿಯವರೆಗೂ ಯಾರಿಗೂ ಮನಸೋತವಳಲ್ಲ ನಿಮ್ಮನ್ನು ನೋಡಿದ ಕೂಡಲೇ ಏನೋ ಸೆಳೆತ,ನನ್ನನ್ನು ಮದುವೆಯಾಗುವಿರಾ?ಎಂದು ಕೇಳಿದಳು. ನಾನು ಒಬ್ಬ ಸನ್ಯಾಸಿ ಇದು ನನ್ನಿಂದ ಸಾಧ್ಯವಿಲ್ಲವೆಂದನು. ಆಗ ಆಮ್ರ ಪಾಲಿಕೆಯು ಮೂರು ತಿಂಗಳ ಗಡುವನ್ನು ಕೊಟ್ಟು ಕಳಿಸಿದಳು.

ಈ ವಿಷಯವನ್ನು ಗೌತಮ ಬುದ್ಧನಿಗೆ ಸನ್ಯಾಸಿ ಮತ್ತು ಎಲ್ಲರೂ ಆಮ್ರ ಪಾಲಿಕೆ ವಿಷಯವನ್ನು ತಿಳಿಸಿದರು. ಸದಾ ಹಸನ್ಮುಖಿ ಶಾಂತ ಮೂರ್ತಿಯಾಗಿದ್ದ ಗೌತಮ ಬುದ್ಧನು, ಆ ಸನ್ಯಾಸಿಯನ್ನು ತನ್ನತ್ತ ಕರೆದು ಅವನನ್ನೇ ದಿಟ್ಟಿಸಿ ನೋಡಿದನು. ಕೂಡಲೆ ಆತನಿಗೆ ಆಮ್ರ ಪಾಲಿಕೆ ಹತ್ತಿರ ಮೂರು ತಿಂಗಳು ಹೋಗಲು ಕಳಿಸಿಕೊಟ್ಟನು. ಉಳಿದವರಿಗೆಲ್ಲಾ ಆಶ್ಚರ್ಯವಾಯಿತು. ಬುದ್ಧನ ಮಾತಿನಂತೆ ಆ ಸನ್ಯಾಸಿಯು ಆಮ್ರ ಪಾಲಿಕೆ ಹತ್ತಿರ ಹೋದನು. ಆಕೆಗೆ ಶರತ್ತನ್ನು ಕೂಡ ಹಾಕಿದನು. ಯಾವುದೇ ಕಾರಣಕ್ಕೆ ನನ್ನನ್ನು ಮುಟ್ಟದೆ ಮೂರು ತಿಂಗಳ ಒಳಗಾಗಿ ಒಲಿಸಿಕೊಳ್ಳುವ ಕಾರ್ಯವನ್ನು ನೀನು ಮಾಡಬಹುದು. ಆಮ್ರ ಪಾಲಿಕೆಯು ಶರತ್ತನ್ನು ಒಪ್ಪಿಕೊಂಡಳು. ಹಾಗೆ ಮೂರು ತಿಂಗಳುಗಳ ಕಾಲ ಸನ್ಯಾಸಿಯನ್ನು ತನ್ನ ಮನೆಯಲ್ಲಿ ಇರಿಸಿಕೊಂಡಳು. ಸನ್ಯಾಸಿಯು ಯಾವುದೇ ಬದಲಾವಣೆ ಆಗಲಿಲ್ಲ. ಅದೇ ತೇಜಸ್ಸು, ಅದೇ ಮಂದಸ್ಮಿತ,ಅದೇ ವೈರಾಗ್ಯ ಭಾವನೆಯಲ್ಲಿ ಆಕೆಯ ಮನೆಯಲ್ಲಿದ್ದರು. 'ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ' ಎನ್ನುವಂತೆ ಆಮ್ರ ಪಾಲಿಕೆಯು ಸನ್ಯಾಸಿಯನ್ನು ಕುರಿತು ಹೇಳುತ್ತಾಳೆ, ನೀನೇ ಇಷ್ಟು ಕಟ್ಟುನಿಟ್ಟಿನ ವ್ರತವನ್ನು ಆಚರಿಸುತ್ತಿರುವೆ ಇನ್ನು ನಿನ್ನ ಬುದ್ಧ ಹೇಗಿರಬಹುದು ನೋಡೋಣ ಎಂದು ಸನ್ಯಾಸಿಯೊಂದಿಗೆ ಗೌತಮ ಬುದ್ಧನ ಹತ್ತಿರ ಬಂದಳು. ಗೌತಮ ಬುದ್ಧನು ಮರದ ಕೆಳಗೆ ಕುಳಿತು ಪ್ರವಚನವನ್ನು ಮಾಡುತ್ತಿದ್ದನು. ಸನ್ಯಾಸಿಯೊಂದಿಗೆ ಆಗಮಿಸಿದ ಆಮ್ರ ಪಾಲಿಕೆಯ ಕಣ್ಣನ್ನೇ ದಿಟ್ಟಿಸಿ ನೋಡಿದ ಗೌತಮ ಬುದ್ಧನು ಆಕೆಯ ಬದಲಾವಣೆಯನ್ನು ಗುರುತಿಸಿದನು. ಗೌತಮ ಬುದ್ಧನ ಪ್ರಭಾವದಿಂದ ತನ್ನ ಸ್ವಭಾವವನ್ನೇ ಬದಲಿಸಿಕೊಂಡಳು ಆಮ್ರಪಾಲಿಕೆ.ಮನಪರಿವರ್ತನೆಯಾದ ನಂತರ ಆಮ್ರ ಪಾಲಿಕೆ ತನ್ನ ಮನೆಗೆ ಅತಿಥಿ ಸತ್ಕಾರ ನೀಡಲು ಅವರನ್ನೆಲ್ಲ ಕರೆದಳು. ಈ ವಿಷಯ ಕೋಸಲರಾಜ್ಯದ ರಾಜ ಮತ್ತು ರಾಣಿಯರಿಗೆ ಗೊತ್ತಾಗಿ ಅವರಿಗೆ ಇದು ಸರಿ ಅನಿಸಲಿಲ್ಲ. ನೀವು ನಮ್ಮ ರಾಜ್ಯಕ್ಕೆ ಆಗಮಿಸಿ ನನ್ನ ಅರಮನೆಯಲ್ಲಿ ಅತಿಥಿಸತ್ಕಾರವನ್ನ ಸ್ವೀಕರಿಸಬಹುದು ಆದರೆ ಆಕೆಯ ಮನೆಗೆ ನೀವು ಹೋಗಬಾರದೆಂದು ರಾಜ ಹೇಳಿದನು. ಆಕೆ ಬದಲಾವಣೆಯಾಗಿರುವುದರಿಂದ ಬುದ್ಧನ ಪರಿವಾರ ಆಕೆ ಮನೆಗೆ ಹೋಗಿತ್ತು. ಹೀಗೆ ದೀಪದಿಂದ ದೀಪವನ್ನು ಬೆಳಗುವಂತೆ ಜ್ಞಾನದಿಂದ ಜ್ಞಾನವನ್ನು ಬೆಳಗಿದ ಮಹಾನ್ ಯೋಗಿ ಗೌತಮ ಬುದ್ಧ. ಹೀಗೆ ಆಮ್ರ ಪಾಲಿಕೆಯು ಬುದ್ಧನ ಉಪದೇಶದಿಂದ ತನ್ನ ಜೀವನದಲ್ಲಿ ಬದಲಾವಣೆಯನ್ನು ಕಂಡುಕೊಂಡು ಬಾಳ ತೊಡಗಿದಳು.



ಉಮಾ ಗವೀಶ ಕಲ್ಮಠ.
ಶಿಕ್ಷಕಿ, ಅಳವಂಡಿ.ಕೊಪ್ಪಳ

Hampi Times E-paper
SCAN AND READ

## ಉಪಗುಪ್ತ ಮತ್ತು ದೇವದತ್ತ:

ಉಪಗುಪ್ತ ಒಬ್ಬ ಬೌದ್ಧ ಸನ್ಯಾಸಿ. ಬುದ್ಧನ ಅನುಯಾಯಿ ಯಾಗಿದ್ದರು. ಒಮ್ಮೆ ಉಪಗುಪ್ತ ಮಥುರಾ ನಗರದ ಮೂಲಕ ಹಾದು ಹೋಗುತ್ತಿರುವಾಗ ರಾತ್ರಿಯಾಗಿ ಅಲ್ಲಿಯೇ ಮಥುರಾ ನಗರದ ಗೋಡೆಯ ಪಕ್ಕದಲ್ಲಿ ಮಲಗಿದ್ದರು. ಅದೇ ಊರಿನಲ್ಲಿ ದೇವದತ್ತಳೆಂಬ ಹೆಸರಿನ ನೃತ್ಯಗಾರ್ತಿ ಇದ್ದಳು. ಆಕೆ ತುಂಬಾ ಸುಂದರವಾದ ಯುವತಿಯಾಗಿದ್ದಳು. ಆಕೆಗೆ ತನ್ನ ಸೌಂದರ್ಯ ಯವ್ವನ ಮತ್ತು ಸಂಪತ್ತಿನ ಮೇಲೆ ಬಹಳ ಅಹಂಕಾರವಿತ್ತು . ಹೀಗಿರುವಾಗ ಅಂದು ರಾತ್ರಿ ನೃತ್ಯವನ್ನು ಮುಗಿಸಿಕೊಂಡು ಮನೆಗೆ ಹೊರಟಿದ್ದಾಗ, ಅಕಸ್ಮಾತಾಗಿ ಆಕೆಯು ಉಪಗುಪ್ತನನ್ನು ಎಡವಿ ಬಿಟ್ಟಳು. ಬೆಚ್ಚಿಬಿದ್ದ ಉಪಗುಪ್ತ ಹಾಗೆ ಎದ್ದು ಕುಳಿತುಕೊಂಡರು. ಕೈಯಲ್ಲಿದ್ದ ದೀಪವನ್ನು ಅವರ ಮುಖಕ್ಕೆ ಒಯ್ದು ಯಾರಿವರು ಎಂದು ದಿಟ್ಟಿಸಿ ನೋಡಿದಳು. ತೇಜಸ್ಸಿನಿಂದ ಕೂಡಿದ ಆ ಮುಖವನ್ನು ನೋಡಿ ಆಕೆಯು ಅವರಿಗೆ ಇದು ನಿಮಗೆ ಮಲಗಲು ಸರಿಯಾದ ಜಾಗವಲ್ಲ ನನ್ನ ಮನೆಗೆ ನೀವು ಬರಬಹುದು ಎಂದು ಅವರನ್ನು ಆಹ್ವಾನಿಸಿದಳು. ಆಗ ಉಪಗುಪ್ತ ನಿನ್ನ ಮನೆಗೆ ಬರುವ ಸಂದರ್ಭ ಬಂದಾಗ ನಾನೇ ಬರುತ್ತೇನೆ ಈಗ ನೀನು ಹೋಗಬಹುದು ಎಂದು ಹೇಳಿದನು. ಹೀಗೆ ದಿನಗಳು ಕಳೆದು ಮತ್ತೆ ಒಂದು ದಿನ ಅದೇ ಉಪಗುಪ್ತ ಅದೇ ಮಥುರಾ ನಗರದ ಮೂಲಕ ಮತ್ತೊಮ್ಮೆ ಬರುವಂತಾಯಿತು. ಬಿರು ಬಿಸಿಲಿನಲ್ಲಿ ನಡೆಯುತ್ತಾ ಮಥುರಾ ನಗರದ ಹೊರ ಭಾಗದಲ್ಲಿ ಇದ್ದ ಮಾವಿನ ಮರದ ಕೆಳಗೆ ವಿಶ್ರಮಿಸಿಕೊಳ್ಳಲೆಂದು ಉಪಗುಪ್ತ ನಡೆದನು. ಆಶ್ಚರ್ಯವೆಂದರೆ ಅವರು ನಿಂತ ಜಾಗದಲ್ಲಿ ಒಬ್ಬ ಮಹಿಳೆ ಮಲಗಿಕೊಂಡಿದ್ದಳು. ಆಕೆ ಕುಷ್ಠ ರೋಗದಿಂದ ಬಳಲುತ್ತಿದ್ದಳು. ಮನೆಯವರು ಮತ್ತು ಊರಿನವರೆಲ್ಲ ಅದು ಅಂಟುರೋಗವಾಗಿದ್ದರಿಂದ ಆಕೆಯನ್ನು ಊರ ಹೊರಗಿನ ಮಾವಿನ ಮರದ ನೆರಳಿಗೆ ಮಲಗಿಸಿದ್ದರು. ಆಕಿಯನ್ನು ನೋಡಿದ ಕೂಡಲೇ ಉಪಗುಪ್ತ ಆಕೆಯ ಹತ್ತಿರಕ್ಕೆ ಹೋಗಿ ಅವಳ ತಲೆಯನ್ನು ತನ್ನ ತೊಡೆಯ ಮೇಲೆ ಹಾಕಿಕೊಂಡು, ತನ್ನ ಕಮಂಡಲನ್ನಲ್ಲಿಯ ನೀರಿನಿಂದ ಆಕೆಯ ಒಣಗಿದ ತುಟಿಗೆ ನೀರನ್ನ ಲೇಪಿಸಿದನು. ಹಾಗೆ ಅವರಲ್ಲಿದ್ದ ಒಂದು ಔಷಧಿಯನ್ನು ಕೂಡ ಆಕೆಯ ಮೈತುಂಬ ಲೇಪಿಸಿದರು. ತನ್ನವರೇ ಎಲ್ಲರೂ ಆಕಿಯನ್ನ ಊರಿನಿಂದ ಹೊರಗಿಟ್ಟದ್ದರು ಕೂಡ, ತನ್ನ ತಲೆಯನ್ನ ತೊಡೆಯ ಮೇಲೆ ಮಲಗಿಸಿಕೊಂಡು ಉಪಚಾರ ಮಾಡಿದ ಕರುಣಾಮಯಿ ಯಾರು ನೀವು ಎಂದು ಪ್ರಶ್ನಿಸಿದಳು, ಆಗ ಉಪಗುಪ್ತ ಹಿಂದೆ ಇದೇ ಮಥುರಾ ನಗರದಲ್ಲಿ ನಿನಗೆ ಮಾತು ಕೊಟ್ಟಂತೆ ಸಂದರ್ಭ ಬಂದಾಗ ಖಂಡಿತ ಬರುತ್ತೇನೆ ಎಂದಿದ್ದೆ ಈಗ ಆ ಸಂದರ್ಭ ಬಂದಿದೆ ಎಂದರು. ಬುದ್ಧರ ಆದರ್ಶಗಳನ್ನು ಪಾಲಿಸುತ್ತಿದ್ದವರು ಉಪಗುಪ್ತ. ಅವರ ಮಾತನ್ನು ಕೇಳುತ್ತಲೇ, ದೇವದತ್ತ ಅವರ ಕಾಲಿಗೆ ರಗಿದಳು. ಹೀಗೆ ಬುದ್ಧರ ಉಪದೇಶಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಬಾಳ ತೊಡಗಿದಳು.

## ಬುದ್ಧ ಮತ್ತು ಅಂಗುಲಿಮಾಲ :

ಒಮ್ಮೆ ಅಂಗುಲಿಮಾಲನೆಂಬ ರಾಕ್ಷಸ ವಿಕೃತನಾಗಿ ಜನರನ್ನ ಕೊಂದು ಅವರ ಬೆರಳಿನಿಂದ ಮಾಲೆಗಳನ್ನು ಮಾಡಿಕೊಂಡು ಅವುಗಳನ್ನು ಕೊರಳಲ್ಲಿ ಧರಿಸಿಕೊಂಡು ಓಡಾಡುತ್ತಿದ್ದನು. ಹೀಗೆ 99 ಜನರನ್ನು ಕೊಂದು 99 ಬೆರಳುಗಳನ್ನು ಮಾಲೆಯನ್ನಾಗಿ ಧರಿಸಿಕೊಂಡಿದ್ದನು. ಇನ್ನೊಂದು ಬೆರಳಿಗಾಗಿ ಕಾಯುತ್ತಿದ್ದನು. ಹೀಗಿರುವಾಗ ಆ ದಾರಿಯಲ್ಲಿ ಯಾರೊಬ್ಬರೂ ಹೋಗುತ್ತಿರಲಿಲ್ಲ. ಎಲ್ಲರೂ ಭಯಭೀತರಾಗಿದ್ದರು. ಹೀಗಿದ್ದಾಗ ಗೌತಮ ಬುದ್ಧನು ಒಮ್ಮೆ ಅದೇ ದಾರಿಯಲ್ಲಿ ಬರುವಂತಾಯಿತು. ಬುದ್ಧರನ್ನು ಕಂಡೊಡನೆ ಜನರು ದೇವಾ ನೀವು ಆ ದಾರಿಯಲ್ಲಿ ಹೋಗುವುದು ಬೇಡ, ಅಲ್ಲಿ ಅಂಗುಲಿಮಾಲನೆಂಬ ರಾಕ್ಷಸನಿದ್ದಾನೆ. ಅಲ್ಲಿ ಬರುವ ಜನರನ್ನ ಕೊಂದು ಅವರ ಬೆರಳನ್ನು ಮಾಲೆಯನ್ನು ಮಾಡಿಕೊಂಡು ಕೊರಳಲ್ಲಿ ಹಾಕಿಕೊಂಡು ಗಹಗಹಿಸಿ ನಗುವ ಸ್ವಭಾವ ಅವನದ್ದಾಗಿದೆ ಎಂದು ಬುದ್ದನಿಗೆ ಅಲ್ಲಿ ಹೋಗದಂತೆ ತಡೆಹಿಡಿದರು. ಆದರೆ ಬುದ್ಧನು ಆ 100ನೇ ವ್ಯಕ್ತಿ ನಾನೇ ಆಗಲಿ ಯಾಕಾಗಬಾರದು ನೋಡುವೆ, ಹೋಗೆ ಹೋಗುತ್ತೇನೆ ಎಂದು ಆ ದಾರಿಯನ್ನು ಹಿಡಿದುಕೊಂಡು ಹೊರಟರು ಎದುರಿಗೆ ಅಂಗುಲಿಮಾಲ ಬಂದೇ ಬಿಟ್ಟನು. ಬುದ್ಧನನ್ನು ನೋಡುತ್ತಲೇ ಅಲ್ಲಿಯೇ ನಿಂತು ಬಿಟ್ಟ. ಅವರ ಮುಖದ ತೇಜಸ್ಸು ಆ ಹೊಳಪು ಅವನನ್ನು ಅಲ್ಲಿಯೇ ನಿಲ್ಲುವಂತೆ ಮಾಡಿತು, ಅಂಗುಲಿಮಾಲ ಬುದ್ಧನಿಗೆ ಮುಂದೆ ಬರದಂತೆ ಎಚ್ಚರಿಸಿದನು. ಆಗ ಬುದ್ಧನು ನನಗೆ ಯಾವ ಭಯವೂ ಇಲ್ಲ ನೀನು ನನ್ನನ್ನು ಕೊಂದು ನನ್ನ ಬೆರಳನ್ನು ತೆಗೆದುಕೊಳ್ಳಬಹುದು ಎಂದನು. ಆದರೆ ಅದಕ್ಕಿಂತ ಮುಂಚೆ ನನ್ನದೊಂದು ಪ್ರಶ್ನೆ ಇದೆ ಅದಕ್ಕೆ ಉತ್ತರಿಸು ನಂತರ ನನ್ನನ್ನು ಕೊಲ್ಲು ಎಂದು ಹೇಳಿದರು, ಅದಕ್ಕೆ ಅಂಗುಲಿಮಾಲ ಯಾವ ಪ್ರಶ್ನೆ ಕೇಳು ಎಂದಾಗ, ಬುದ್ಧನು ಇಲ್ಲಿಯೇ ಇದ್ದ ಒಂದು ಮರದ ಟೊಂಗೆಯ ಯನ್ನು ನನಗಾಗಿ ಕಡಿದು ತರವೆಯಾ ಎಂದು ಕೇಳಿದರು, ಈಗಲೇ ತರುತ್ತೇನೆ ಎಂದು ಅಂಗುಲಿಮಾಲ ಕೈಯಲ್ಲಿದ್ದ ಕೊಡಲಿಯನ್ನು ತೆಗೆದುಕೊಂಡು ಹೋಗಿ ಮರದ ಟೊಂಗಿಯನ್ನು, ಕತ್ತರಿಸಿಕೊಂಡು ತಂದನು, ತುಂಬಾ ಸಂತೋಷ ಈಗ ಟೊಂಗೆ ಯನ್ನು ಮೊದಲಿನಂತೆ ಆ ಗಿಡಕ್ಕೆ ಹಚ್ಚಿ ಬರಬೇಕು ಎಂದನು. ಅದು ಸಾಧ್ಯವಿಲ್ಲವೆಂದ ಅಂಗುಲಿಮಾಲ. ಆಗ ಬುದ್ದನು 99 ಜನರನ್ನು ಕೊಂದ ನಿನಗೆ ಮರಳಿ ಅವರನ್ನು ಬದುಕಿಸಲು ಸಾಧ್ಯವೇ ಎಂದು ಪ್ರಶ್ನಿಸಿದನು. ಬದುಕಿಸಲು ಸಾಧ್ಯವಾಗದ ನಿನಗೆ ಅವರನ್ನು ಸಾಯಿಸುವ ಹಕ್ಕು ಇಲ್ಲ. ಒಂದು ಜೀವಿಯನ್ನು ಬದುಕಿಸಲು ಸಾಧ್ಯವಾಗದ ನಮಗೆ ಅದನ್ನು ನಾಶಪಡಿಸುವ ಹಕ್ಕು ನಮಗಿಲ್ಲ. ಹೀಗೆ ಬುದ್ಧನ ಮಾತುಗಳನ್ನು ಕೇಳುತ್ತಲೇ ಅಂಗುಲಿಮಾಲ ಮರು ಮಾತನಾಡದಾದ. ಬುದ್ಧನ ಮಾತು ನಿಜ ಎನಿಸಿತು. ತಾನು ಮಾಡುವ ಕೆಲಸ ತಪ್ಪು ಎಂದು ಗೊತ್ತಾಯಿತು. ದೈವಿ ಸಂಭೂತನಾದ ಗೌತಮ ಬುದ್ಧನ ಪ್ರಭಾವದಿಂದ ಅಂಗುಲಿಮಾಲ ಬದಲಾವಣೆಗೊಂಡ. ಬುದ್ಧನ ಜೊತೆಗೆ ಬರಲು ಸಿದ್ಧನಾದ. ಆದರೆ ಗೌತಮ ಬುದ್ಧನು ಆತನಿಗೆ ಕೆಲವು ದಿನಗಳು ನೀನು ಇಲ್ಲಿಯೇ ಇರಬೇಕು ಇದೇ ಜನರ ಮಧ್ಯದಲ್ಲಿ ನೀನು ಜೀವನ ಮಾಡಬೇಕು ನೀನು ಬದಲಾದದ್ದನ್ನು ಖಾತ್ರಿಯಾದ ನಂತರವೇ ನಾನು ನನ್ನೊಂದಿಗೆ ಕರೆದುಕೊಂಡು ಹೋಗುವೆ ಎಂದು ಹೇಳಿ ಅಲ್ಲಿಂದ ಹೊರಟರು.

ಇತ್ತ ಅಂಗುಲಿಮಾಲ ಯಾರು ಬಂದರು ಅವರನ್ನು ಕೊಲ್ಲದೆ ಅವರ ಬೆರಳನ್ನು ಮಾಲೆ ಮಾಡಿಕೊಳ್ಳದೆ ಇದ್ದಮಾಲೆಯನ್ನು ಬಿಸಾಕಿದನು. ಈಗ ಮೃದು ಸ್ವಭಾವದ ವ್ಯಕ್ತಿಯಾಗಿ ಬದಲಾದ ಮೊದಮೊದಲು ಜನರು ಆತನನ್ನು ಬೈದರು ಹೊಡೆದರು. ಆತನ ಕೃತ್ಯಕ್ಕೆ ಹೀಯಾಳಿಸಿದರು. ಅಂಗುಲಿಮಾಲ ಎಲ್ಲದನ್ನು ಸಹಿಸಿಕೊಂಡನು ಯಾರಿಗೂ ಒಂದು ಮಾತಾಡದೆ ಎಲ್ಲರಿಗೂ ಒಳ್ಳೆಯ ಕೆಲಸವನ್ನೇ ಮಾಡಲು ಶುರು ಮಾಡಿದನು. ಮೊದಮೊದಲು ಅಂಗುಲಿಮಾಲನನ್ನು ಧಿಕ್ಕರಿಸುತ್ತಿದ್ದ ಜನರು ಈಗ ಕ್ರಮೇಣವಾಗಿ ಅವನನ್ನು ಸ್ವೀಕರಿಸಲು ಶುರು ಮಾಡಿದರು. ಆತನಲ್ಲಿಯ ಬದಲಾವಣೆಯನ್ನು ಒಪ್ಪಿಕೊಂಡರು. ಹೀಗೆ ಜನರ ಮಧ್ಯ ಮೃದು ಸ್ವಭಾವದ ವ್ಯಕ್ತಿಯಾಗಿ ಬಾಳತೊಡಗಿದನು. ಕೆಲವು ದಿನಗಳ ನಂತರ ಸ್ವತ: ಗೌತಮ ಬುದ್ಧನೇ ಅಲ್ಲಿಗೆ ಬಂದು ಅತನನ್ನು ಪರೀಕ್ಷಿಸಿ ತನ್ನೊಂದಿಗೆ ಅಂಗುಲಿಮಾಲನನ್ನು ಕರೆದುಕೊಂಡು ಹೋದನು. ಹೀಗೆ ಅಂಗುಲಿಮಾಲ ತನ್ನ ಜೀವನದಲ್ಲಿ ಬದಲಾವಣೆಯನ್ನು ಕಂಡು ಗೌತಮ ಬುದ್ಧನ ಅನುಯಾಯಿಯಾಗಿ ಬಾಳತೊಡಗಿದನು.

## ಮಡದಿ ಯಶೋಧರೆ ಮಗ ರಾಹುಲ ಬದಲಾದದ್ದು :

ಒಮ್ಮೆ ಗೌತಮ ಬುದ್ಧನು ಭಿಕ್ಷೆಯನ್ನು ಸ್ವತ: ತನ್ನ ಅರಮನೆಯ ಮುಂದೆ ಬಂಬಿಡುತ್ತಾದು ಭಿಕ್ಷೆಯನ್ನು ಬಿಡಲು ನಿಂತನು. ಆಗ ಆತನ ಹೆಂಡತಿ ಯಶೋಧರೆ ಭಿಕ್ಷೆಯನ್ನು ನೀಡಲು ಮುಂದೆ ಬಂದಾಗ. ಅವರು ತನ್ನ ಪತಿ ಎಂದು ಆಕೆಗೆ ಅರಿವಾಯಿತು. ಬುದ್ಧನನ್ನು ಕುರಿತು ಯಶೋಧರೆ ಹೇಳುತ್ತಾಳೆ ನೀವು ಹೋಗುವಾಗ ಒಂದು ಮಾತನ್ನು ನನಗೆ ಹೇಳದೆ ಹೋದಿರಿ ನನಗೆ ಹೇಳಿದ್ದರೆ ನಾನು ಬೇಡವೆಂದು ಹೇಳುತ್ತಿದ್ದೇನೆ. ಅಲ್ಲಿ ಮಾಡಿದ ಕೆಲಸವನ್ನು ಇಲ್ಲಿಂದಲೇ ಮಾಡಬಹುದಿತ್ತಲ್ಲ ಎಂದು ಪ್ರಶ್ನಿಸಿದಳು? ಬುದ್ಧನು ನಿರುತ್ತರನಾ ದನು. ನೀವಿಲ್ಲದ ಅರಮನೆಯಲ್ಲಿ ನಾನಿರಲಾರೆ ಎಂದು ಯಶೋಧರೆಯು ಬೌದ್ಧ ಧರ್ಮವನ್ನು ಸ್ವೀಕರಿಸಿ ಬುದ್ಧನ ಉಪದೇಶಗಳನ್ನು ಸಾರುತ್ತಾ, ಅವನೊಂದಿಗೆ ಹೊರಟಳು. ಮಗ ರಾಹುಲ್ ಕೂಡ ತಾಯಿಯೊಂದಿಗೆ ಹೊರಟನು. ಹೀಗೆ ಯಶೋಧರೆ ಮತ್ತು ರಾಹುಲ್ ಕೂಡ ಬುದ್ಧನ ಉಪದೇಶಗಳಿಂದ ಬದಲಾವಣೆಗೊಂಡು ತಮ್ಮ ಜೀವನವನ್ನೇ ಬದಲಿಸಿಕೊಂಡರು,

## ಅಶೋಕ ಚಕ್ರವರ್ತಿ:

ಅಶೋಕ ಚಕ್ರವರ್ತಿ ಕಳಿಂಗ ಯುದ್ಧದಲ್ಲಿ ಸಾವು ನೋವುಗಳನ್ನು ಕಂಡು ಇನ್ನು ಮುಂದೆ ಜೀವನದಲ್ಲಿ ಈ ರೀತಿಯ ಹಿಂಸೆಯನ್ನು ಮಾಡಬಾರದು ಎಂದು ಪ್ರತಿಜ್ಞೆ ಮಾಡಿದನು. ಅಂದೆ ಖಡ್ಗವನ್ನು ಬಿಸಾಕಿದನು. ಧರ್ಮದಿಂದ ರಾಜ್ಯಭಾರವನ್ನು ಮಾಡಲು ಶುರು ಮಾಡಿದನು, ಆಸೆಯೇ ದುಃಖಕ್ಕೆ ಮೂಲವೆಂಬ ಸತ್ಯವನ್ನು ಅರಿತು ಬೌದ್ಧ ಧರ್ಮದ ಪ್ರವರ್ತಕನಾದನು.

ಬೌದ್ಧ ಧರ್ಮದ ಪ್ರಸಾರಕ್ಕಾಗಿ ಸಾಕಷ್ಟು ಶ್ರಮಿಸಿದನು. ಶ್ರೀಲಂಕಾ ಕ್ಕೆ ತನ್ನ ಸ್ವತಃ ಮಕ್ಕಳಾದ ಸಂಘ ಮಿತ್ರೆ ಮತ್ತು ಮಹೇಂದ್ರರನ್ನು ಬೌದ್ಧ ಧರ್ಮದ ಪ್ರಸಾರಕ್ಕಾಗಿ ಕಳುಹಿಸಿಕೊಟ್ಟನು. ಹೀಗೆ ಭಾರತದಲ್ಲಿ ಗೌತಮ ಬುದ್ಧನು ಹಲವಾರು ಉಪದೇಶಗಳನ್ನು ಮಾಡುತ್ತಾ ಜನರಿಗೆ ಹತ್ತಿರವಾದರು .

ಆಸೆಯೇ ದುಃಖಕ್ಕೆ ಮೂಲವೆಂದು ಜನರಿಗೆ ತಿಳಿಸಿದರು. ಮುಂದೆ ಭಾರತದಲ್ಲಿ ಅಂಬೇಡ್ಕರ್ರು ಕೂಡ ಬೌದ್ಧ ಧರ್ಮದ ಅನುಯಾಯಿಯಾದರು. ಇಂದಿಗೂ ಗೌತಮ ಬುದ್ಧರು ಬೋಧಿಸಿದ ಉಪದೇಶಗಳು ಜೀವಂತವಾಗಿವೆ ಮನುಕುಲಕ್ಕೆ ಹತ್ತಿರವಾಗಿವೆ. ಧರ್ಮ ಯಾವುದಾದರೇನು? ಮಾನವನ ಒಳಿತಿಗಾಗಿ ಇದ್ದರೆ ಪಾಲಿಸುವುದರಲ್ಲಿ ತಪ್ಪೇನಿದೆ? ಅಲ್ಲವೇ?.

ಸಂಗ್ರಹ ಸಾಹಿತ್ಯ:



**ಕವಿ ಮನಸು**

## ದೊರೆಯಲಿ ರಹದಾರಿ



ನಲ್ಲ: ತಾಳೆನು ಗೆಳತಿಯೆ ಕಳೆದಿದೆ ಸಂಯಮ
ಏತಕೆ ನಿಲ್ಲುವೆ ನೀ ದೂರ
ಬಾಳಿನ ಬಂಡಿಯ ಗಾಲಿಯನೆಳೆಯುವ
ಜೋಡಿಯ ಮಾಡೆಯ ಸ್ವೀಕಾರ

ನಲ್ಲೆ: ತಾಳಿಯ ಬಿಗಿಯಲು ಕಾದಿಹೆ
ಇನಿಯನೆ
ತಾಳ್ಮೆಯು ಬೇಕಿದೆ ಸರದಾರ
ದಾಳಿಯ ಗೈಯುವ ಬಯಕೆಯ ಹಿಡಿದಿಡು
ಪ್ರೀತಿಯೆ ಬದುಕಿಗೆ ಆಧಾರ

ನಲ್ಲ :ದೊರಕಿದ ವೇಳೆಯ ಬಳಸದೆ
ಬಿಡುವುದೆ?
ಆಗಿಹೆ ಏತಕೆ ಹಠಮಾರಿ
ಸೇರದೆ ಹೋದರೆ ಆಗುವೆ ನಾನಿದೊ
ನೆಮ್ಮದಿ ಇಲ್ಲದ ಅಲೆಮಾರಿ

ನಲ್ಲೆ: ಅರಿತುಕೊ ಬೇಗನೆ ನಲ್ಮೆಯ ಗೆಳೆಯನೆ
ಸೇರಿಸಲೆಮ್ಮನು ಗಿರಿಧಾರಿ
ಹಿರಿಯರನೊಪ್ಪಿಸಿ ಮದುವೆಯ ಮಾಡಿಕೊ
ಸಿಗುವುದು ಸರಸಕೆ ರಹದಾರಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ನಗುವ ಬುದ್ಧ



ವೈಶಾಖ ಪೂರ್ಣಿಮಾ ದಿನದಂದು
ಗೌತಮನ ಜನನ,
ಜೀವನ ನಿರ್ವಹಣೆ, ಪರಿಪೂರ್ಣತೆ ಬಗ್ಗೆ
ಮಾಡಿಸಿದ್ದರು ಮನನ.
ಆಸೆ, ಆಕಾಂಕ್ಷೆ, ರಾಜ ವೈಭೋಗವನ್ನು
ತೊರೆದ,
ಕಾಲ ಕಾಲಕ್ಕೂ ಇತಿಹಾಸದ ಪುಟಗಳಲ್ಲಿ
ಮೆರೆದ.
ಸಂದೇಹ ಬದುಕನ್ನು
ಹಾಳುಮಾಡುವುದರಲ್ಲಿ ಸಂದೇಹವಿಲ್ಲ,
ಕೋಪ ಮನುಷ್ಯನನ್ನು ಕೂಪಕ್ಕೆ ತಳ್ಳುವುದು
ಸುಳ್ಳಲ್ಲ.
ಭಗವಾನ್ ಬುದ್ಧನ ತತ್ವಗಳ ಪಾಲನೆ,
ಜೀವನವನ್ನು ಮುಕ್ತಿ ಪಥಕ್ಕೆ ಮಾಡಿದಂತೆ
ಆವಾಹನೆ.
ಹಲವರ ನಂಬುಗೆ ಇವ ವಿಷ್ಣುವಿನ
ಅವತಾರ,
ಸಂತೋಷ, ಯಶಸ್ಸಿಗಾಗಿ ಜನರಲ್ಲಿ
ಮೂಡಿಸಿದ ಸಾಕ್ಷಾತ್ಕರ.
ಜನ್ಮ, ಜ್ಞಾನೋದಯ, ಮೋಕ್ಷ ಎಲ್ಲವನ್ನೂ
ಪಡೆದ ಈ ದಿನ,
ಪ್ರತಿ ಜೀವಿಗಳು ಭಗವಾನ್ ಹೆಸರನ್ನು
ಸ್ಮರಿಸುವ ಪುಣ್ಯ ದಿನ.

ಮಂಜುಶ್ರೀ ಮುರಳೀಧರ್.

## ಏಳೇಳು ಜನ್ಮಕೂ...

ಇನಿಯನ ಹೃದಯದ ಮಾತಿಗೆ
ಸೋತಿರುವೆ ಬರಹದ ಗುಟ್ಟಿಗೆ।

ಚಂದದ ಒಲವಿನ ಭಾಷೆಗೆ
ಕರಗಿದೆ ಹೃದಯ ಮೆಲ್ಲಗೆ।

ಕಾದಿರುವೆ ನೀ ಬರುವ ದಾರಿಗೆ
ನೀ ಕಂಡ ಕ್ಷಣ ಬರುವುದು ನಸುನಗೆ।

ನೀ ಹತ್ತಿರ ಪ್ರತಿ ಕ್ಷಣ ಇರಬೇಕು
ನಾ ಮೆಲ್ಲಗೆ ನಿನ್ನಲ್ಲೇ ಬರಬೇಕು।

ಏಳೇಳು ಜನ್ಮಕೂ ನೀ ನನ್ನ ನಲ್ಲ
ನಿನ್ನೊಡನೆ ನಾನು ಬೇವು ಬೆಲ್ಲ।

ಅರಿಷಿಣ ಕುಂಕುಮ ಬಳೆ ನಾರಿ ಸಂಕೇತ
ನೀ ನೋಡುತ ಹರಿಸಬೇಕು ನನ್ನ ದಿನ ನಿತ್ಯ।

– ಚಂದ್ರಶೇಖರಯ್ಯ ರೋಣದಮಠ

ಹಂಪಿ ಟೈಮ್ಸ್
HAMPI TIMES

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**22–05–2024 – ಬುಧವಾರ**

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಸ್ವಾತಿ |
| ಯೋಗ | : ವಾರಿಯಾಣ |
| ಕರಣ | : ಗರಜ |
| ಸೂರ್ಯೋದಯ | : 05:44:17 |
| ಸೂರ್ಯಾಸ್ತ | : 19:03:14 |
| ರಾಹು | : 12:24–14:04 |
| ಯಮಘಂಡ | : 07:24–09:04 |
| ಗುಳಿಕ | : 10:44–12:24 |

## ತುಂಗಭದ್ರಾ ನೀರಿನ ಮಟ್ಟ



**ಮಂಗಳವಾರ : 21–05–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.52 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.384 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1579.04 ಅಡಿ |
| ಒಳ ಹರಿವು | 907 ಕ್ಯುಸೆಕ್ |
| ಹೊರ ಹರಿವು | 250 ಕ್ಯುಸೆಕ್ |
| ಸಾಮರ್ಥ್ಯ | 4.020 ಟಿಎಂಸಿ |

# ಎಲ್ಲಾ ನೀರಿನ ಮೂಲಗಳನ್ನು ನಿರಂತರ ಪರೀಕ್ಷಿಸಿ ಬಳಸಿ

**ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ ಸೂಚನೆ । ವಾಂತಿ–ಭೇದಿ ಪ್ರಕರಣಗಳು ಉಂಟಾಗದಂತೆ ಕ್ರಮವಹಿಸಿ ಕ್ಷಯರೋಗ ಪರೀಕ್ಷೆ ನಂತರ ಶೇ.20ರಷ್ಟು ನೂತನ ಪ್ರಕರಣಗಳಲ್ಲಿ ಇಳಿಕೆಯಾಗಿರುವುದು ಆಶಾದಾಯಕ**



■ **ಹಂಪಿ ಟೈಮ್ಸ್ ಬಳ್ಳಾರಿ**

ಮಳೆಗಾಲ ಆರಂಭದ ಹಿನ್ನಲೆಯಲ್ಲಿ ಕುಡಿಯುವ ನೀರು ಕಲುಷಿತಗೊಳ್ಳುವ ಸಂಭವವಿದ್ದು, ಇದರಿಂದ ಉಂಟಾಗಬಹುದಾದ ವಾಂತಿಭೇದಿ ಪ್ರಕರಣಗಳ ನಿಯಂತ್ರಣಕ್ಕಾಗಿ ಎಲ್ಲಾ ನೀರಿನ ಮೂಲಗಳನ್ನು ನಿರಂತರವಾಗಿ ಪರೀಕ್ಷೆಗೊಳಪಡಿಸುವ ಮೂಲಕ ಯಾವುದೇ ರೀತಿಯ ಗಂಭೀರ ಪ್ರಕರಣಗಳು ಸಂಭವಿಸದಂತೆ ಎಚ್ಚರವಹಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಸೂಚಿಸಿದರು.

ನಗರದ ಜಿಪಂ ನಜೀರ್ ಸಭಾಂಗಣದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ವಿವಿಧ ಇಲಾಖೆಗಳ ಜಂಟಿಯಾಗಿ ಏರ್ಪಡಿಸಿದ್ದ ಜಿಲ್ಲಾ ಆರೋಗ್ಯ ಸಂಘದ ಸಭೆಯ ಅಧ್ಯಕ್ಷತೆ ವಹಿಸಿ ಮಂಗಳವಾರ ಮಾತನಾಡಿದರು.

ಜಿಲ್ಲೆಯೂ ಸೇರಿದಂತೆ ವಿವಿಧೆಡೆ ಮಳೆ ಸುರಿಯುತ್ತಿರುವ ಹಿನ್ನಲೆಯಲ್ಲಿ ನೀರಿನ ಎಲ್ಲ ಮೂಲಗಳನ್ನು ಸಕಾಲದಲ್ಲಿ ಗ್ರಾಮ ಪಂಚಾಯತ ಸೇರಿದಂತೆಸ್ಥಳೀಯಸಂಸ್ಥೆಗಳಸಹಕಾರದೊಂದಿಗೆ ಸಕಾಲದಲ್ಲಿ ನಿಯಮಾನುಸಾರ ಕ್ಲೋರಿನೇಷನ್ ಮಾಡಿಸಿ ನಿರಂತರವಾಗಿ ಪರೀಕ್ಷೆಗಳನ್ನು ಕೈಗೊಂಡು ಯಾವುದೇ ವಾಂತಿಭೇದಿ ಪ್ರಕರಣಗಳು ಉಂಟಾಗದಂತೆ ಗ್ರಾಮ ಪಂಚಾಯತ್ ಒಳಗೊಂಡಂತೆ ಎಲ್ಲ ಸ್ಥಳೀಯ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಿ ಕ್ರಮವಹಿಸಿ ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ವೈ.ರಮೇಶ್ ಬಾಬು ಅವರು ಮಾತನಾಡಿ, ಜಿಲ್ಲೆಯಲ್ಲಿ ಇಲ್ಲಿಯವರೆಗೆ ಪ್ರಮುಖ ಜಾತ್ರೆಗಳು, ಉತ್ಸವಗಳಲ್ಲಿ ಜಿಲ್ಲಾ ಕಾಲರಾ ನಿಯಂತ್ರಣ ತಂಡವು ಸಕಾಲದಲ್ಲಿ ಉಪಸ್ಥಿತರಿದ್ದು, ನೀರಿನ ಮೂಲಗಳು, ಆಹಾರದ ತಯಾರಿಕೆಯ ಸ್ಥಳ ಮುಂತಾದವುಗಳನ್ನು ಪರಿಶೀಲಿಸಿ ನಿಗಾ ವಹಿಸುವ ಮೂಲಕ ವಾಂತಿ–ಭೇದಿ ಪ್ರಕರಣಗಳು ಉಂಟಾಗದಂತೆ ಕ್ರಮವಹಿಸಿಲಾಗಿದೆ.

ಇಲ್ಲಿಯವರೆಗೆ 4027 ನೀರಿನ ಮೂಲಗಳನ್ನು ಪರೀಕ್ಷಿಸಿದ್ದು, ಅಶುದ್ಧವೆಂದು ಕಂಡು ಬಂದ ನೀರಿನ ಮೂಲಗಳನ್ನು ಸಕಾಲದಲ್ಲಿ ಪರೀಕ್ಷೆಗೊಳಪಡಿಸಿ ನೀರು ಪೂರೈಕೆಗೆ ಸ್ಥಳೀಯ ಸಂಸ್ಥೆಗಳೊಂದಿಗೆ ಕೈಜೋಡಿಸಲಾಗಿದೆ. ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಕ್ಷಯರೋಗ ಪರೀಕ್ಷೆ ಕೈಗೊಂಡ ನಂತರ ಶೇ.20ರಷ್ಟು ನೂತನ ಪ್ರಕರಣಗಳಲ್ಲಿ ಇಳಿಕೆಯಾಗಿರುವುದು ಆಶಾದಾಯಕವಾಗಿದೆ ಎಂದರು.

ಬಾಲ್ಯದಲ್ಲಿ ಕಾಡುವ ಮಾರಕ ರೋಗಗಳ ತಡೆಗೆ ಲಸಿಕೆಯನ್ನು ಮಕ್ಕಳಿಗೆ ಸಕಾಲದಲ್ಲಿ ಹಾಕಿಸಲಾಗುತ್ತಿದೆ ಹಾಗೂ ಬಿಟ್ಟು ಹೋದ ಮಕ್ಕಳು ಲಸಿಕೆ ವಂಚಿತ ಮಕ್ಕಳನ್ನು ಗುರ್ತಿಸಿ ಲಸಿಕೆ ಹಾಕಲು ಮುತುರ್ವಜಿ ವಹಿಸಲಾಗಿದೆ. ಅದರಲ್ಲೂ ದಡಾರ ಮತ್ತು ರೂಬೆಲ್ಲಾ ಪ್ರಕರಣಗಳು ಕಂಡುಬರದಂತೆ ಆದ್ಯತೆ ನೀಡಿ ಯಾವುದೇ ಮಗು ಲಸಿಕೆ ವಂಚಿತವಾಗದಂತೆ ಕ್ಷೇತ್ರ ಮಟ್ಟದ ಸಿಬ್ಬಂದಿಯವರು ಅಧಿಕಾರಿಗಳು ಕ್ರಿಯಾ ಯೋಜನೆ ಹಮ್ಮಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು.

ಮಳೆಯ ಆರಂಭದ ಹಿನ್ನೆಲೆಯಲ್ಲಿ ಸೊಳ್ಳೆಯಿಂದ ಹರಡುವ ಕಾಯಿಲೆಗಳ ನಿಯಂತ್ರಣಕ್ಕೆ ಯಾವುದೇ ನ್ಯೂನ್ಯತೆ ಉಂಟಾಗದಂತೆ ನೀರಿನ ಸಂಗ್ರಹಗಾರಗಳನ್ನು ಪ್ರತಿ ವಾರಕ್ಕೊಮ್ಮೆ ಸ್ವಚ್ಚಗೊಳಿಸಿ ಸೊಳ್ಳೆ ಉತ್ಪತ್ತಿ ನಿಯಂತ್ರಣಕ್ಕೆ ಅಗತ್ಯವಿದ್ದಲ್ಲಿ ಸ್ಥಳೀಯ ಪಂಚಾಯತಿಗಳೊಂದಿಗೆ ಚರ್ಚಿಸಿ ವ್ಯಾಪಕ ಪ್ರಚಾರ ಕೈಗೊಳ್ಳಲು ಸೂಚಿಸಿದರು.

ಸಭೆಯಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಹಾಗೂ ನವಜಾತ ಶಿಶುಗಳ ಆರೈಕೆ ಕಾರ್ಯಕ್ರಮದ ಕುರಿತು ವ್ಯಾಪಕವಾಗಿ ಚರ್ಚಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಬಸರೆಡ್ಡಿ, ವಿಮ್ಸ್ ಅಧೀಕ್ಷಕ ಡಾ.ಚಿದಂಬರಂ, ವಿಶ್ವ ಆರೋಗ್ಯ ಸಂಸ್ಥೆಯ ಬಳ್ಳಾರಿ ಪ್ರತಿನಿಧಿ ಡಾ.ಆರ್.ಎಸ್.ಶ್ರೀಧರ್, ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ.ಅಬ್ದುಲ್ಲಾ, ಡಾ.ಪೂರ್ಣಿಮಾ ಕಟ್ಟಿಮನಿ, ಡಾ.ಮರಿಯಂಬಿ, ಡಾ.ಇಂದ್ರಾಣಿ, ಡಾ.ವೀರೇಂದ್ರ ಕುಮಾರ, ಡಾ. ಹನುಮಂತಪ್ಪ, ತಾಲ್ಲೂಕು ಆರೋಗ್ಯ ಅಧಿಕಾರಿಗಳಾದ ಡಾ.ಈರಣ್ಣ, ಡಾ.ಭರತ್, ಡಾ.ಅರುಣ್, ಡಾ.ಮಂಜುನಾಥ ಜವಳಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಡಾ.ಜಬೀನ್ ತಾಜ್, ಡಿಎನ್‌ಓ ಗಿರೀಶ್, ವೆಂಕೋಬ್ ನಾಯ್ಕ್ ಹಾಗೂ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಉಪಸ್ಥಿತರಿದ್ದರು.

## ಹಂಪಿಯಲ್ಲಿ ಧರೆಗುರುಳಿದ ಐತಿಹಾಸಿಕ ಸಾಲುಮಂಟಪಗಳು



**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿಯಲ್ಲಿ ಸೋಮವಾರ ರಾತ್ರಿ ಗುಡುಗು, ಸಿಡಿಲು ಸಹಿತ ಸುರಿದ ಬಿರುಗಾಳಿ ಮಳೆಗೆ ಐತಿಹಾಸಿಕ ಹಂಪಿಯ ಸಾಲುಮಂಟಪದ ಕಲ್ಲುಗಳು ನೆಲಕ್ಕುರುಳಿವೆ.

ಹಂಪಿಯ ರಥ ಬೀದಿ ಪಕ್ಕದ ಸಾಲುಮಂಟಪಗಳು ನಿರ್ವಹಣೆ ಕೊರತೆಯಿಂದ ಮಳೆಗೆ ಉರುಳಿ ಬಿದ್ದಿದ್ದು, ಸ್ಮಾರಕ ಪ್ರಿಯರು ನಿರ್ವಹಣೆ ಹೊತ್ತ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿರ್ವಹಣೆಗೆಂದು ಕೋಟ್ಯಾಂತರ ರೂ ಅನುದಾನ ಬಿಡುಗಡೆ ಮಾಡುತ್ತಿದ್ದರೂ, ನಿರ್ವಹಣೆ ಸಮರ್ಪಕವಾಗಿ ಆಗುತ್ತಿಲ್ಲವೆಂಬುದಕ್ಕೆ ಇಂದು ಮಳೆಗೆ ಉರುಳಿದ ಸ್ಮಾರಕಗಳೇ ಸಾಕ್ಷಿ ಎಂದು ಪ್ರವಾಸಿಗರು ಅಸಮಾಧಾನ ಹೊರಹಾಕಿದ್ದಾರೆ. ಇನ್ನಾದರೂ ರಾಜ್ಯ ಮತ್ತು ಕೇಂದ್ರ ಭಾರತೀಯ ಪುರಾತತ್ವ ಇಲಾಖೆ ಅಧಿಕಾರಿಗಳು ವಿಜಯನಗರ ಸಂಸ್ಕೃತಿ ಕಲೆಗಳನ್ನು ಉಳಿಸಲು ಮುಂದಾಗಲಿ ಎಂದು ಒತ್ತಾಯಿಸಿದ್ದಾರೆ.

## ಸರ್ಕಾರಿ ಐ.ಟಿ.ಐ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಸಿರುಗುಪ್ಪ**

ಸಿರುಗುಪ್ಪದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಪ್ರಸ್ತಕ ಸಾಲಿಗೆ ವಿವಿಧ ವೃತ್ತಿಗಳಾದ ವಿದ್ಯುತ್ ಕರ್ಮಿ, ಜೋಡಣೆಗಾರ ಪ್ರವೇಶಕ್ಕಾಗಿ ಮೆರಿಟ್–ಕಮ್–ಲಿಸರ್ವೇಶನ್ ಆಧಾರದ ಮೇಲೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಿರುಗುಪ್ಪ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ವಿ.ಶೇಷಣ್ಣ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ಅರ್ಹ ಆಸಕ್ತ ಅಭ್ಯರ್ಥಿಗಳು ಸಿರುಗುಪ್ಪದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಜೂನ್ 03 ರೊಳಗಾಗಿ ಅರ್ಜಿ ಸಲ್ಲಿಸಬಹುದು.

**ಬೇಕಾದ ದಾಖಲೆಗಳು:** ಆಧಾರ್ ಕಾರ್ಡ್, ಹೈ.ಕ (371ಜೆ) ಪ್ರಮಾಣ ಪತ್ರ, ಎಸ್.ಎಸ್.ಎಲ್.ಸಿ ಅಂಕಪಟ್ಟಿ, ವರ್ಗಾವಣೆ ಪ್ರಮಾಣ ಪತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಕನ್ನಡ ಹಾಗೂ ಗ್ರಾಮೀಣ ಪ್ರಮಾಣ ಪತ್ರ, ಇನ್ನೀತರ ದಾಖಲಾತಿಗಳು. ಹೆಚ್ಚಿನ ಮಾಹಿತಿಗಾಗಿ ಮೊ.9448441568, 9902781032 ಹಾಗೂ 9980862730, 9108128468 ಗೆ ಸಂಪರ್ಕಿಸಬಹುದು.

## ಹೊಸ ಪದವಿ ಕಾಲೇಜ್ ಆರಂಭಿಸಲು ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ವಿಶ್ವವಿದ್ಯಾಲಯದಿಂದ 2024–25 ನೇ ಸಾಲಿಗೆ ಕೊಪ್ಪಳ ವಿಶ್ವವಿದ್ಯಾಲಯದ ಅಧೀನ ಕಾಲೇಜುಗಳಿಂದ ಮತ್ತು ನೋಂದಾಯಿತ ಸಂಘ ಸಂಸ್ಥೆ/ಸಾರ್ವಜನಿಕ ಟ್ರಸ್ಟ್ ಗಳಿಂದ ಕಲಾ, ವಿಜ್ಞಾನ, ವಾಣಿಜ್ಯ ಹಾಗೂ ಇನ್ನಿತರ ಸಾಂಪ್ರದಾಯಿಕ ವಿಷಯಗಳಲ್ಲಿ ಹೊಸ ಪದವಿ ಮಹಾವಿದ್ಯಾಲಯಗಳನ್ನು ಆರಂಭಿಸಲು ಗಗಅಒಖ ತಂತ್ರಾಂಶದ ಮೂಲಕ ದಂಡ ರಹಿತ ಶುಲ್ಕದೊಂದಿಗೆ ಅರ್ಜಿ ಸಲ್ಲಿಕೆ ಅವಧಿಯನ್ನು ಮೇ 24 ರವರೆಗೆ ಹಾಗೂ ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಮೇ 28 ರವರೆಗೆ ಅವಧಿ ವಿಸ್ತರಿಸಲಾಗಿದೆ.

ಆಸಕ್ತ ನೋಂದಾಯಿತ ಸಂಘ ಸಂಸ್ಥೆ/ಟ್ರಸ್ಟ್‌ಗಳ ಸಂಯೋಜಕರು ಮೂಲ ದಾಖಲೆಗಳೊಂದಿಗೆ ದಂಡ ರಹಿತ ಶುಲ್ಕದೊಂದಿಗೆ ಮೇ 24 ರವರೆಗೆ ಮತ್ತು ದಂಡ ಶುಲ್ಕದೊಂದಿಗೆ ಮೇ 28 ರ ಸಂಜೆ 5 ಗಂಟೆಯೊಳಗೆ ನಿಗದಿತ ಯೋಜನಾ ಶುಲ್ಕ ಪಾವತಿಸಿ ಯೋಜನೆಗಳಿಗೆ http://uucms.Karnataka.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಪ್ರಸ್ತುತ ಸಂಯೋಜನೆ ಹೊಂದಿರುವ ಮಹಾವಿದ್ಯಾಲಯಗಳಿಂದ ಸ್ನಾತಕ/ಸ್ನಾತಕೋತ್ತರ ಕೋರ್ಸ್ಗಳಿಗೆ ಮುಂದುವರಿಕೆ/ವಿಸ್ತರಣೆ/ಹೊಸಕೋರ್ಸ್/ಹೊಸವಿಷಯ/ಸ್ನಾತಕೋತ್ತರ ಸಂಯೋಜನೆ/ಶಾಶ್ವತ ಸಂಯೋಜನೆ ನವೀಕರಣ/ಮಹಾವಿದ್ಯಾಲಗಳ ಹೆಸರು ಬದಲಾವಣೆ/ಮಹಾವಿದ್ಯಾಲಯ ಸ್ಥಳಾಂತರ/ಆಡಳಿತ ಮಂಡಳಿ ಹೆಚ್ಚಳ/ಶಾಶ್ವತ ಬದಲಾವಣೆ ಹಾಗೂ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ವಿವರ, ಸಂಯೋಜಿತ ಶುಲ್ಕಗಳ ವಿವರ ಹಾಗೂ ಸಂಯೋಜನೆಗೆ ಅರ್ಜಿ ಸಲ್ಲಿಸುವ ಮಾಹಿತಿಯನ್ನು ತಳಕಲ್ ಹತ್ತಿರದ ಸರಕಾರಿ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿರುವ ಕೊಪ್ಪಳ ವಿಶ್ವವಿದ್ಯಾಲಯಕ್ಕೆ ಖುದ್ದಾಗಿ ಭೇಟಿ ನೀಡಿ ತಿಳಿದುಕೊಳ್ಳಬಹುದು ಅಥವಾ ವಿಶ್ವವಿದ್ಯಾಲಯದ ಜಾಲತಾಣ www.koppaluniversity.ac.in ದಿಂದ ಮಾಹಿತಿ ಪಡೆಯಬಹುದು ಎಂದು ವಿವಿ ಕುಲಸಚಿವರಾದ ಪ್ರೊ.ಕೆ.ವಿ. ಪ್ರಸಾದ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರೈತ ಮಕ್ಕಳಿಗೆ ತೋಟಗಾರಿಕೆ ತರಬೇತಿ: ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಕೊಪ್ಪಳ**

2024–25ನೇ ಸಾಲಿಗೆ ಕೊಪ್ಪಳ ಜಿಲ್ಲೆಯ ಆಸಕ್ತ ಅರ್ಹ ರೈತ ಮಕ್ಕಳಿಂದ ಕೊಪ್ಪಳ ತಾಲೂಕಿನ ಮುನಿರಾಬಾದಿನ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ 09 ತಿಂಗಳ ತೋಟಗಾರಿಕೆ ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

2024 ರ ಜೂನ್ 15 ರಿಂದ 2025ರ ಮಾರ್ಚ್ 31 ರವರೆಗೆ 09 ತಿಂಗಳುಗಳ ಕಾಲ ತರಬೇತಿಯನ್ನು ನೀಡಲಾಗುತ್ತದೆ. ತರಬೇತಿಗಾಗಿ ಸಾಮಾನ್ಯ ಅಭ್ಯರ್ಥಿ–17, ಪರಿಶಿಷ್ಠ ಜಾತಿ–03 ಗಳಂತೆ ಒಟ್ಟು 20 ಅಭ್ಯರ್ಥಿಗಳ ಗುರಿ ನಿಗದಿಪಡಿಸಲಾಗಿದೆ. ಅರ್ಜಿ ಸಲ್ಲಿಸಲು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರಿಗೆ ಕನಿಷ್ಠ 18 ವರ್ಷ ಗರಿಷ್ಠ 33 ವರ್ಷ, ಇತರರಿಗೆ ಕನಿಷ್ಠ 18 ವರ್ಷ ಗರಿಷ್ಠ 30 ವರ್ಷ ವಯೀಮಿತಿ ನಿಗದಿಪಡಿಸಲಾಗಿದೆ.

ಅಭ್ಯರ್ಥಿಗಳು ಕನ್ನಡ ವಿಷಯಗಳೊಂದಿಗೆ 10ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಚೆನ್ನಾಗಿ ಕನ್ನಡ ಓದುವುದು, ಬರೆಯುವುದು ಮತ್ತು ಮಾತನಾಡುವುದನ್ನು ಬಲ್ಲವರಾಗಿರಬೇಕು. ಈ ತರಬೇತಿಯು ರೈತರ ಮಕ್ಕಳಿಗಾಗಿ ಇರುವುದರಿಂದ ಅಭ್ಯರ್ಥಿಯ ತಂದೆ/ತಾಯಿ ಅಥವಾ ಪೋಷಕರು (ತಂದೆ/ತಾಯಿ ಇಲ್ಲದ ಪಕ್ಷದಲ್ಲಿ) ಕಡ್ಡಾಯವಾಗಿ ಜಮೀನು ಹೊಂದಿರಬೇಕು ಹಾಗೂ ಸ್ವಂತ ಸಾಗುವಳಿ ಮಾಡುತ್ತಿರಬೇಕು. ಈ ಬಗ್ಗೆ ಪಹಣಿಯನ್ನು ನೀಡುವುದು ಕಡ್ಡಾಯವಾಗಿರುತ್ತದೆ . ಅಭ್ಯರ್ಥಿಗಳು ತೋಟದ ಕೆಲಸಗಳನ್ನು ಮಾಡುವಷ್ಟು ದೃಢಕಾಯರಾಗಿರಬೇಕು.

ಸಾಮಾನ್ಯ ಅಭ್ಯರ್ಥಿಗಳಿಗೆ ರೂ. 30, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರಿಗೆ ರೂ.15 ಅರ್ಜಿ ಶುಲ್ಕವನ್ನು ನಿಗದಿಪಡಿಸಲಾಗಿದ್ದು, ಪೋಸ್ಟಲ್ ಆರ್ಡರ್(ಐಪಿಒ) ಅಥವಾ ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) ಯನ್ನು ತೋಟಗಾರಿಕೆ ಉಪನಿರ್ದೇಶಕರು(ಜಿ.ಪಂ), ಕೊಪ್ಪಳ ರವರ ಹೆಸರಿನಲ್ಲಿ ಪಡೆದು ಅರ್ಜಿ ಜೊತೆಗೆ ಲಗತ್ತಿಸಬೇಕು.

ಈಗಾಗಲೇ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ಹೊರತುಪಡಿಸಿ ಹೊಸದಾಗಿ ಅರ್ಜಿ ಸಲ್ಲಿಸಲು ಇಚ್ಚಿಸುವ ಅಭ್ಯರ್ಥಿಗಳು ಮೇ 23 ರಿಂದ ಜೂನ್ 03 ರವರೆಗೆ ತೋಟಗಾರಿಕೆ ಉಪನಿರ್ದೇಶಕರು(ಜಿ.ಪಂ), ಕೊಪ್ಪಳ, ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾ.ವ) ಕೊಪ್ಪಳ ರವರ ಕಛೇರಿಯಲ್ಲಿ ಪಡೆಯಬಹುದು ಅಥವಾ ಇಲಾಖಾ ವೆಬ್‌ಸೈಟ್ www.horticulture.kar.nic.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ನಿಗದಿತ ಅರ್ಜಿಗಳನ್ನು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಜೂನ್ 03 ರ ಸಂಜೆ 05.30 ಗಂಟೆಯೊಳಗಾಗಿ ತೋಟಗಾರಿಕೆ ಉಪನಿರ್ದೇಶಕರು (ಜಿ.ಪಂ)ಕೊಪ್ಪಳ ಅಥವಾ ಸಹಾಯಕ ತೋಟಗಾರಿಕೆ ನಿರ್ದೇಕರು (ರಾವ) ಕೊಪ್ಪಳ ರವರ ಕಛೇರಿಗೆ ಸಲ್ಲಿಸಬೇಕು.

ಜೂನ್ 06 ರಂದು ಬೆಳಿಗ್ಗೆ 10 ಗಂಟೆಗೆ ತೋಟಗಾರಿಕೆ ಉಪನಿರ್ದೇಶಕರು (ಜಿ.ಪಂ) ಕೊಪ್ಪಳ ಕಛೇರಿಯಲ್ಲಿ ಸಂದರ್ಶನಕ್ಕೆ ಎಲ್ಲಾ ಮೂಲ ದಾಖಾಲಾತಿಗಳೊಂದಿಗೆ ಹಾಜರಾಗಬೇಕು. ಇದಕ್ಕಾಗಿ ಪ್ರತ್ಯೇಕ ಸಂದರ್ಶನ ಪತ್ರವನ್ನುಕಳುಹಿಸಲಾಗುವುದಿಲ್ಲಎಂದುತೋಟಗಾರಿಕೆಉಪನಿರ್ದೇಶಕರಾದ ಕೃಷ್ಣ ಉಕ್ಕುಂದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಜ್ಞಾನ

### ಕತ್ತರಿಸಿದ ಸೇಬಿನ ತುಂಡುಗಳು ಏಕೆ ಕಂದು ಬಣ್ಣಕ್ಕೆ ತಿರುಗುತ್ತವೆ?

■ **ಆರ್.ಬಿ.ಗುರುಬಸವರಾಜ**

ಓದುತ್ತಾ ಕುಳಿತಿದ್ದ ಸಂತೋಷನಿಗೆ ಅಮ್ಮ ಸೇಬು ಹಣ್ಣು ಕತ್ತರಿಸಿ ಕೊಟ್ಟಳು. ಅದನ್ನು ಪಕ್ಕದಲ್ಲಿ ಇಟ್ಟುಕೊಂಡು ಓದುವುದರಲ್ಲೆ ಮಗ್ನನಾದ. ಸ್ವಲ್ಪ ಸಮಯದ ನಂತರ ಸೇಬು ತಿನ್ನಲು ಮುಂದಾದ. ಆದರೆ ಹೋಳುಗಳೆಲ್ಲ ಕಂದು ಬಣ್ಣಕ್ಕೆ ತಿರುಗಿದ್ದವು. "ಅಮ್ಮಾ, ಸೇಬುಗಳೆಲ್ಲ ಕೆಟ್ಟಿವೆ" ಎಂದ. ಅಲ್ಲಿಗೆ ಬಂದು ನೋಡಿದ ಅಮ್ಮ 'ಇಲ್ಲ ಮಗನೆ ನಾನು ಕತ್ತರಿಸಿದಾಗ ಚೆನ್ನಾಗಿಯೇ ಇದ್ದವು. ಕತ್ತರಿಸಿ ಇಟ್ಟದ್ದರಿಂದ ಹೀಗಾಗಿವೆ' ಎಂದಳು ತಾಯಿ. "ಕತ್ತರಿಸಿದ ಸೇಬಿನ ಹೋಳುಗಳು ಏಕೆ ಕಂಡು ಬಣ್ಣಕ್ಕೆ ತಿರುಗತ್ತವೆ?" ಎಂಬ ಪ್ರಶ್ನೆಗೆ ಪುಸ್ತಕ ಓದಿ ಉತ್ತರ ತಿಳಿದಿಕೊಂಡ.

ಸೇಬನ್ನು ತುಂಡುಗಳಾಗಿ ಕತ್ತರಿಸಿದಾಗ, ಅದರ ತಿರುಳು ಗಾಳಿಗೆ ತೆರೆದುಕೊಳ್ಳುತ್ತದೆ. ವಾತಾವರಣದಲ್ಲಿನ ಆಮ್ಲಜನಕಕ್ಕೆ ಒಡ್ಡಿಕೊಳ್ಳುವುದರಿಂದ ಸೇಬು ಕಂದು ಬಣ್ಣಕ್ಕೆ ತಿರುಗುವ ರಾಸಾಯನಿಕ ಕ್ರಿಯೆ ಜರುಗುತ್ತದೆ. ಆಮ್ಲಜನಕದ ಸೇರ್ಪಡೆಯು ಸೇಬಿನಲ್ಲಿ ಎಂಜೈಮ್ಯಾಟಿಕ್ ಬ್ರೌನಿಂಗ್ ಎಂಬ ರಾಸಾಯನಿಕ ಕ್ರಿಯೆಯನ್ನು ಪ್ರಚೋದಿಸುತ್ತದೆ. ಎಂಜೈಮ್ಯಾಟಿಕ್ ಬ್ರೌನಿಂಗ್ ಎನ್ನುವುದು ನೈಸರ್ಗಿಕ ಪ್ರಕ್ರಿಯೆಯಾಗಿದ್ದು ಅದು ಅನೇಕ ಹಣ್ಣುಗಳು ಮತ್ತು ತರಕಾರಿಗಳನ್ನು ಕತ್ತರಿಸಿದಾಗ ಸಂಭವಿಸುತ್ತದೆ.



ಸೇಬಿನ ಜೀವಕೋಶಗಳಲ್ಲಿ ಕಂಡುಬರುವ ಪಾಲಿಫಿನಾಲ್ ಆಕ್ಸಿಡೇಸ್ ಎಂಬ ಕಿಣ್ವವು ಗಾಳಿಯಲ್ಲಿನ ಆಮ್ಲಜನಕದೊಂದಿಗೆ ಪ್ರತಿಕ್ರಿಯಿಸುವುದರಿಂದ ಕಂದು ಬಣ್ಣ ತಿರುಗುತ್ತವೆ. ಈ ಪ್ರತಿಕ್ರಿಯೆಯು ಸೇಬಿನಲ್ಲಿರುವ ಫೀನಾಲಿಕ್ ಸಂಯುಕ್ತಗಳನ್ನು ಆಕ್ಸಿಡೀಕರಿಸಲು ಮತ್ತು ಮೆಲನಿನ್ ಅನ್ನು ರೂಪಿಸಲು ಕಾರಣವಾಗುತ್ತದೆ. ಮೆಲನಿನ್ ಎಂಬುದು ಮಾನವನ ಚರ್ಮ ಮತ್ತು ಕೂದಲಿಗೆ ಬಣ್ಣವನ್ನು ನೀಡುವ ವರ್ಣದ್ರವ್ಯವಾಗಿದೆ.

ಕಂದುಬಣ್ಣದ ಪ್ರಮಾಣ ಮತ್ತು ವೇಗವು ಸೇಬಿನ ವಿಧ, ಪಕ್ವತೆಯ ಮಟ್ಟ ಮತ್ತು ಗಾಳಿಗೆ ಒಡ್ಡಿಕೊಳ್ಳುವ ಪ್ರಮಾಣ ಮುಂತಾದ ವಿವಿಧ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ. ಗ್ರಾನ್ನಿ ಸ್ಮಿತ್ ಸೇಬುಗಳಂತಹ ಉನ್ನತ ಮಟ್ಟದ ಪಾಲಿಫಿನಾಲ್ ಆಕ್ಸಿಡೇಸ್‌ಗಳ ಕಾರಣದಿಂದಾಗಿ ಕೆಲವು ಸೇಬುಗಳು ಇತರೆ ಸೇಬುಗಳಿಗಿಂತ ಹೆಚ್ಚು ಕಂದುಬಣ್ಣಕ್ಕೆ ಒಳಗಾಗುತ್ತವೆ. ಆದಾಗ್ಯೂ ಕಂದು ಬಣ್ಣವು ಸೇಬಿನ ರುಚಿ, ಪೌಷ್ಟಿಕಾಂಶ, ಸೇಬಿನ ಗುಣಮಟ್ಟ ಅಥವಾ ಸುರಕ್ಷತೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಇದು ಕೇವಲ ನೈಸರ್ಗಿಕ ರಾಸಾಯನಿಕ ಕ್ರಿಯೆಯಾಗಿದೆ.

ಸೇಬುಗಳನ್ನು ಕತ್ತರಿಸಿದಾಗ ಕಂದು ಬಣ್ಣಕ್ಕೆ ತಿರುಗುವುದನ್ನು ತಡೆಯುವ ಮಾರ್ಗಗಳಿವೆ. ನಿಂಬೆ ರಸ, ವಿನೆಗರ್ ಅಥವಾ ಸ್ವಲ್ಪ ವಿಟಮಿನ್–ಸಿ ಪುಡಿಯಂತಹ ಆಮ್ಲೀಯ ವಸ್ತುವಿನೊಂದಿಗೆ ಸೇಬಿನ ತುಂಡುಗಳಿಗೆ ತಕ್ಷಣವೇ ಲೇಪಿಸುವುದು ಒಂದು ಮಾರ್ಗವಾಗಿದೆ. ಕತ್ತರಿಸಿದ ಸೇಬಿನ ತುಂಡುಗಳನ್ನು ರೆಫ್ರಿಜರೇಟರ್‌ನಲ್ಲಿ ಗಾಳಿಯಾಡದ ಧಾರಕದಲ್ಲಿ ಇಡುವುದರಿಂದ ಸೇಬು ಆಮ್ಲಜನಕಕ್ಕೆ ಒಡ್ಡಿಕೊಳ್ಳುವುದನ್ನು ಮಿತಿಗೊಳಿಸುತ್ತದೆ.

## ಐ.ಟಿ.ಐ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಕುಡತಿನಿ**

ಕುಡತಿನಿ ಪಟ್ಟಣದಲ್ಲಿನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ(ಐಟಿಐ)ಗೆ 2024–25 ಗೆ ಸಾಲಿಗೆ ವಿವಿಧ ವೃತ್ತಿಗಳಿಗೆ ಮೆರಿಟ್–ಕಮ್–ಲಿಸರ್ವೇಶನ್ ಆಧಾರದ ಮೇಲೆ ಆನ್‌ಲೈನ್ ಮೂಲಕ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಕುಡತಿನಿಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ವಿ.ಶೇಷಣ್ಣ ಅವರು ತಿಳಿಸಿದ್ದಾರೆ. ಕಾಲೇಜಿನಲ್ಲಿ ಲಭ್ಯವಿರುವ ಇ.ಎಂ, ಜೋಡಣೆಗಾರ, ವಿದ್ಯುತ್‌ಕರ್ಮಿ, ಚರಕಿಗಾರ ವೃತ್ತಿಗಳಿಗೆ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

**ಬೇಕಾಗಿರುವ ದಾಖಲೆಗಳು:** ಆಧಾರ್ ಕಾರ್ಡ್, ಹೈ.ಕ (371ಜೆ) ಪ್ರಮಾಣ ಪತ್ರ, ಎಸ್.ಎಸ್.ಎಲ್.ಸಿ ಅಂಕಪಟ್ಟಿ, ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ), ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಕನ್ನಡ ಮತ್ತು ಗ್ರಾಮೀಣ ಪ್ರಮಾಣ ಪತ್ರ ಹಾಗೂ ಇನ್ನಿತರ ದಾಖಲಾತಿಗಳು. ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ಅರ್ಹ ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಕುಡತಿನಿಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಜೂನ್ 03 ರೊಳಗಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊ.9448441568, 9449666314 ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

## ಐಟಿಐ ಪ್ರವೇಶಾತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸಕ್ತ ಸಾಲಿನ ಸರ್ಕಾರಿ ಹಾಗೂ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ವಿವಿಧ ವೃತ್ತಿಗಳಿಗೆ ಪ್ರವೇಶಕ್ಕಾಗಿ ಮೆರಿಟ್–ಕಮ್–ರಿಸರ್ವೇಶನ್ ಆಧಾರದ ಮೇಲೆ ಬಳ್ಳಾರಿ ಜಿಲ್ಲೆಯಲ್ಲಿ ಬರುವ ಸಂಸ್ಥೆಗಳಲ್ಲಿ ಆನ್‌ಲೈನ್ ಮೂಲಕ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಅಂಕಪಟ್ಟಿ, ಆಧಾರ್ ಕಾರ್ಡ್, ಹೈಕ(371ಜೆ) ಪ್ರಮಾಣಪತ್ರ ಮತ್ತು ಟಿಸಿ, ಜಾತಿ ಮತ್ತು ಆದಾಯ ಪ್ರಮಾಣಪತ್ರ, ಕನ್ನಡ ಹಾಗೂ ಗ್ರಾಮೀಣ ಪ್ರಮಾಣ ಪತ್ರಗಳು ಹಾಗೂ ಇನ್ನೀತರ ದಾಖಲೆಗಳೊಂದಿಗೆ ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ ಅರ್ಹ ಆಸಕ್ತ ಅಭ್ಯರ್ಥಿಗಳು ಬಳ್ಳಾರಿಯ ಕಂಟೋನ್ಮೆಂಟ್ ಪ್ರದೇಶದ ರೇಡಿಯೋ ಪಾರ್ಕ್ ಹತ್ತಿರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಜೂ.03 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಟಾಟಾ ಉದ್ಯೋಗ ಯೋಜನೆಯಡಿ ಅನುಷ್ಠಾನಗೊಳಿಸಿರುವ 03 ಮತ್ತು 10 ದೀರ್ಘಾವಧಿಯ ವೃತ್ತಿಗಳಿಗೆ ಆನ್‌ಲೈನ್‌ನಲ್ಲಿ ಮೊದಲ ಆದ್ಯತೆ ಮೇರೆಗೆ ನೇರವಾಗಿ ಪ್ರವೇಶ ಮಾಡಿಕೊಳ್ಳಲಾಗುವುದು.

ಮಾಹಿತಿಗಾಗಿ ವೆಬ್‌ಸೈಟ್ ವಿಳಾಸ www.cite.karnataka.gov.in ಗೆ ಭೇಟಿ ನೀಡಬಹುದು. ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಬಳ್ಳಾರಿ ಹಾಗೂ ಹತ್ತಿರದ ಸರ್ಕಾರಿ ಐಟಿಐ ಗೆ ಭೇಟಿ ನೀಡಿ ವಿಚಾರಿಸಬಹುದು ಅಥವಾ ದೂ.08392–294527, ಮೊ.9902351985, 9448421922 ಗೆ ಸಂಪರ್ಕಿಸಬಹುದು

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA